PRGI No: KNKAN/26/A1167

ವಿಜಯನಗರ – ಕೊಪ್ಪಳ – ಬಳ್ಳಾರಿ – ರಾಯಚೂರು ಜಿಲ್ಲೆಗಳಲ್ಲಿ ಏಕ ಕಾಲಕ್ಕೆ ಪ್ರಕಟಿತ

# ಹೊಸಪೇಟೆ ನಾಡಿಮಿಡಿತ

# HOSAPETE NAADIMIDITHA

KANNADA DAILY NEWS PAPER ವಿಜಯನಗರ ಆವೃತ್ತಿ ಕನ್ನಡ ದಿನಪತ್ರಿಕೆ

POSTAL REG NO : PMG/KA/NK/BLY/05/2026-2028

ಸಂಪಾದಕರು : ರಾಮಜಿ ನಾಯ್ಕ್ ಆರ್

ವ್ಯವಸ್ಥಾಪಕ ಸಂಪಾದಕರು : ಬಿ ಹೆಚ್ ಎಸ್ ರಾಜು

ಸಹ ಸಂಪಾದಕರು : ವಿ ಗಾಳೆಪ್ಪ

ಸುದ್ದಿ ಜಾಹೀರಾತಿಗಾಗಿ ಸಂಪರ್ಕಿಸಿರಿ

ಮೊ: 9980107729
9845757747
9538367319

Editor : Ramjee Naik R

Vol.–01 Issue–191 11/10/2026 Sunday Rs.02/–E-mail:hosapetenadimidita@gmail.com ಸಂಪುಟ–01ಸಂಚಿಕೆ–191 ರವಿವಾರ 11/10/2026ಬೆಲೆ ರೂ.02/–

## ಬೈಲುವದ್ದಿಗೇರಿಯಲ್ಲಿ ನರೇಗಾ ಕಾರ್ಮಿಕರ ಪರದಾಟ

# ಏಪ್ರಿಲ್ ಕೂಲಿ ಬಾಕಿ, 450 ಕಾರ್ಮಿಕರಿಗೆ ಫೋಟೋಗೆ ಒಬ್ಬರೇ ಸಿಬ್ಬಂದಿ



ಹೊಸಪೇಟೆ, 10– ವಿಜಯನಗರ ಜಿಲ್ಲೆಯ ಹೊಸಪೇಟೆ ತಾಲೂಕಿನ ಬೈಲುವದ್ದಿಗೇರಿ ಗ್ರಾಮ ಪಂಚಾಯಿತಿ ವ್ಯಾಪ್ತಿಯಲ್ಲಿ ವಿಬಿ–ಜಿ ರಾಮ್–ಜಿ (ಹಿಂದಿನ ನರೇಗಾ) ಯೋಜನೆಯಲ್ಲಿ ಕೆಲಸ ಮಾಡಿದ ಕಾರ್ಮಿಕರಿಗೆ ಏಪ್ರಿಲ್ ತಿಂಗಳ ಕೂಲಿ ಹಣ ಇನ್ನೂ ಪಾವತಿಯಾಗಿಲ್ಲದೆ ಕಾರ್ಮಿಕರು ತೀವ್ರ ಅಸಮಾಧಾನ ವ್ಯಕ್ತಪಡಿಸಿದ್ದಾರೆ.

ಗ್ರಾಮ ಪಂಚಾಯಿತಿ ವ್ಯಾಪ್ತಿಯಲ್ಲಿ ಸುಮಾರು 300 ಕಾರ್ಮಿಕರು ಏಪ್ರಿಲ್ ತಿಂಗಳಲ್ಲಿ ಕೆಲಸ ಮಾಡಿದ್ದರೂ ಇಲ್ಲಿಯವರೆಗೆ ಕೂಲಿ ಬಂದಿಲ್ಲ ಎಂದು ಆರೋಪಿಸಿದ್ದಾರೆ.

ಇಂದು ಬೆಳಿಗ್ಗೆ ಸುಮಾರು 450 ಕಾರ್ಮಿಕರು ಕೆಲಸಕ್ಕೆ ಹಾಜರಾಗಿದ್ದರು. ಬೆಳಿಗ್ಗೆ 7 ಗಂಟೆಗೆ ಕೆಲಸಕ್ಕೆ ಬರಲು 2 ಕಿ.ಮೀ ನಡೆದುಕೊಂಡು ಬಂದಿದ್ದಾರೆ. ಆದರೆ ಹಾಜರಾತಿ ದೃಢೀಕರಣಕ್ಕಾಗಿ ಒಒಖ ಫೋಟೋ ತೆಗೆಯಲು ಕೇವಲ ಒಬ್ಬರೇ ಸಿಬ್ಬಂದಿ ಸ್ಥಳಕ್ಕೆ ಬಂದಿದ್ದರಿಂದ ಗಂಟೆಗಟ್ಟಲೆ ಕಾಯುವಂತಾಗಿದೆ ಎಂದು ಕಾರ್ಮಿಕರು ದೂರಿದ್ದಾರೆ.

ಇದರ ಜೊತೆಗೆ ಬಿಸಿಲಿನ ತಾಪ ಹೆಚ್ಚಾಗಿದ್ದರೂ ಕೆಲಸದ ಸ್ಥಳದಲ್ಲಿ ಕುಡಿಯುವ ನೀರು ಮತ್ತು ನೆರಳಿನ ವ್ಯವಸ್ಥೆ ಇಲ್ಲದೆ ಕಾರ್ಮಿಕರು ಸಂಕಷ್ಟ ಅನುಭವಿಸುತ್ತಿದ್ದಾರೆ. ದೂರದಿಂದ ದುಡಿಯಲು ಬರುವ ಕಾರ್ಮಿಕರಿಗೆ ಮೂಲಸೌಕರ್ಯ ಕಲ್ಪಿಸುವಲ್ಲಿ ಅಧಿಕಾರಿಗಳು ನಿರ್ಲಕ್ಷ್ಯ ವಹಿಸುತ್ತಿದ್ದಾರೆ ಎಂದು ಆಕ್ರೋಶ ವ್ಯಕ್ತಪಡಿಸಿದ್ದಾರೆ.

ಬಾಕಿ ಕೂಲಿ ತಕ್ಷಣ ಬಿಡುಗಡೆ ಮಾಡಬೇಕು, ಒಒಖ ಗೆ ಹೆಚ್ಚುವರಿ ಸಿಬ್ಬಂದಿ ನಿಯೋಜಿಸಬೇಕು ಮತ್ತು ಕುಡಿಯುವ ನೀರು, ನೆರಳಿನ ವ್ಯವಸ್ಥೆ ಕಲ್ಪಿಸಬೇಕು ಎಂದು ಕಾರ್ಮಿಕರು ಒತ್ತಾಯಿಸಿದ್ದಾರೆ.

ಈ ಸಂದರ್ಭದಲ್ಲಿ ಈಡಿಗ ಸಮುದಾಯದ ಯರಿಸ್ವಾಮಿ ನಾಯಕ, ಹರಿಜನ ಸಮುದಾಯದ ಮಲ್ಲ, ಕುರುಬ ಸಮುದಾಯದ ದೊಡ್ಡಯ್ಯ, ಅಗಸ ಸಮುದಾಯದ ಚಿದಾನಂದ ಕಪಗಲ್, ಕೊಮಾರಪ್ಪ ಸೇರಿದಂತೆ ವಿವಿಧ ಸಮುದಾಯಗಳ ಕಾರ್ಮಿಕರು ಮತ್ತು ಎಲ್ಲ ಮೇಟಿಗಳು ಉಪಸ್ಥಿತರಿದ್ದರು.

ಸಂಬಂಧಪಟ್ಟ ಅಧಿಕಾರಿಗಳು ಸ್ಥಳಕ್ಕೆ ಭೇಟಿ ನೀಡಿ ಸಮಸ್ಯೆ ಬಗೆಹರಿಸುತ್ತಾರೆಯೇ ಕಾದು ನೋಡಬೇಕಿದೆ

# ಹಂಪಿಯ ತುಂಗಭದ್ರಾ ದಡದಲ್ಲಿ ಪಿತೃ ಪಕ್ಷದ ಧಾರ್ಮಿಕ ವಿಧಿವಿಧಾನ

ಹಂಪಿ, 10– ಪಿತೃ ಪಕ್ಷದ ಹಿನ್ನೆಲೆಯಲ್ಲಿ ವಿಜಯನಗರ ಜಿಲ್ಲೆ ಹೊಸಪೇಟೆ ತಾಲೂಕಿನ ಹಂಪಿಯ ತುಂಗಭದ್ರಾ ನದಿ ದಡದಲ್ಲಿ ಇಂದು ಪೂರ್ವಜರನ್ನು ಸ್ಮರಿಸುವ ಧಾರ್ಮಿಕ ವಿಧಿವಿಧಾನಗಳು ಜರುಗಿದವು.

ಪೂರ್ವಜರಿಗೆ ಗೌರವ ಸಲ್ಲಿಸುವ ಸಂಪ್ರದಾಯದ ಅಂಗವಾಗಿ ಪಿತೃ ತರ್ಪಣ, ಪ್ರಾರ್ಥನೆ ಸೇರಿದಂತೆ ವಿವಿಧ ಧಾರ್ಮಿಕ ಆಚರಣೆಗಳಿಗೆ ಈ ಸಂದರ್ಭದಲ್ಲಿ ಮಹತ್ವ ನೀಡಲಾಗುತ್ತದೆ.

ಹಂಪಿಯ ತುಂಗಭದ್ರಾ ನದಿ ದಡದಲ್ಲಿನ ಧಾರ್ಮಿಕ ವಿಧಿವಿಧಾನ ಮಂಟಪದಲ್ಲಿ ಹಂಪಿ ಪುರೋಹಿತರಿಂದ ನಡೆದ ಪೂಜಾ ವಿಧಿವಿಧಾನದ ಮೂಲಕ ಭಕ್ತರು ತಮ್ಮ ಪಿತೃಗಳಿಗೆ ತರ್ಪಣ ಅರ್ಪಿಸಿದರು.

ಪಿತೃ ಪಕ್ಷವು ಪೂರ್ವಜರನ್ನು ಸ್ಮರಿಸಿ ಅವರಿಗೆ ಕೃತಜ್ಞತೆ ಸಲ್ಲಿಸುವ ಪವಿತ್ರ ಕಾಲವೆಂದು ಹಿಂದೂ ಧಾರ್ಮಿಕ ಪರಂಪರೆಯಲ್ಲಿ ನಂಬಲಾಗಿದೆ. ಹೀಗಾಗಿ ಹಂಪಿಯ ತುಂಗಭದ್ರಾ ನದಿ ತೀರವು ಧಾರ್ಮಿಕ ಮಹತ್ವ ಹೊಂದಿರುವ ಹಿನ್ನೆಲೆಯಲ್ಲಿ ಭಕ್ತರ ಪಾಲಿಗೆ ವಿಶೇಷ ಸ್ಥಾನ ಪಡೆದಿದೆ.



# ಐಕ್ಯತೆ ಸಾಮರಸ್ಯ ಸರ್ವರ ಬದುಕಾಗಲಿ: ಕೋಡಿಹಳ್ಳಿ ಭೀಮಪ್ಪ



ವರದಿ :ಡಿ.ಪರಶುರಾಮಪ್ಪ

ಹೂವಿನಹಡಗಲಿ: ಐಕ್ಯತೆ ಸಾಮರಸ್ಯ ಸರ್ವರ ಬದುಕಾಗಲಿ ಎಂದು ಮಾನವ ಬಂಧುತ್ವ ವೇದಿಕೆಯ ಮುಖಂಡರಾದ ಕೋಡಿಹಳ್ಳಿ ಭೀಮಪ್ಪ ಅಭಿಮತ ವ್ಯಕ್ತಪಡಿಸಿದರು.

ಪಟ್ಟಣದ ಮಾನವ ಬಂಧುತ್ವ ವೇದಿಕೆ ಹಾಗೂ ವಿವಿಧ ಪ್ರಗತಿಪರ ಸಂಘಟನೆಗಳ ಸಹಯೋಗದಲ್ಲಿ ಮಲ್ಲಿಗೆ ನಾಡಿನ ಸೌಹಾರ್ದತೆ ಸಾಮರಸ್ಯ ಸಾರುವ ಮನುಷ್ಯ ಮನುಷ್ಯರಲ್ಲಿ ಬೆಸುಗೆ ಹಾಕುವ ಸದುದ್ದೇಶದಿಂದ ಶುಕ್ರವಾರ ಆಯೋಜಿಸಿದ್ದ ಸೌಹಾರ್ದ ನಡಿಗೆ ಜಾಥಾಕ್ಕೆ ಚಾಲನೆ ನೀಡಿ ಅವರು ಮಾತನಾಡಿದರು.

ಸೂಫಿ ಸಂತರು ಬಸವಣ್ಣ ಅಂಬೇಡ್ಕರ್ ಗಾಂಧೀಜಿ ಮಹಾನ್ ನಾಯಕರು ಭ್ರಾತೃತ್ವ ಸೌಹಾರ್ದತೆಯ ನೆಲೆಗಳಲ್ಲಿ ಸಮಾಜದ ಪ್ರತಿಯೊಬ್ಬ ಜನರ ಬದುಕು ಸುಧಾರಣೆ ಆಗಲು ಶ್ರಮಿಸಿದರು. ಇಂದು ಕ್ಷುಲ್ಲಕ ಕಾರಣಕ್ಕಾಗಿ ಸಮಾಜ ಒಡೆಯುವ ಹುನ್ನಾರ ನಡೆಯುತ್ತಿದೆ ಎಂದು ವಿಷಾದಿಸಿದರು.

ಇಂದಿಗೂ ಹಳ್ಳಿಗಳಲ್ಲಿ ಹಲೆಹಬ್ಬ, ಉರುಸು ಸಾಂಸ್ಕೃತಿಕ ಹಬ್ಬಗಳನ್ನು ಎಲ್ಲಾ ಧರ್ಮದವರು ಒಗ್ಗಟ್ಟಾಗಿ ಆಚರಿಸುತ್ತಾರೆ.ಈ ಪರಂಪರೆ ಮುಂದುವರೆಯಲಿ ಎಂದು ಆಶಿಸಿದರು.

ನಾಗತಿ ಬಸಾಪುರ ಸದ್ಗುರು ಶಿವಯೋಗಿ ಮಂಜುನಾಥ ಹಾಲಸ್ವಾಮಿ ಮಾತನಾಡಿ ಮನುಷ್ಯ ಮನುಷ್ಯರನ್ನು ಒಡೆದು ಆಳುವ ಬ್ರಿಟಿಷ್ ತಂತ್ರಗಾರಿಕೆ ಬೇಡ. ಕೋಮು ಸೌಹಾರ್ದತೆ ಹಾಳು ಮಾಡುವ ಪ್ರಚೋದನಕಾರಿ ಭಾಷಣ ಮಾಡಿದರೆ ಪ್ರಗತಿಪರ ಸಂಘಟನೆಗಳ ಕಾರ್ಯಕರ್ತರು ಸೂಕ್ತ ಉತ್ತರ ನೀಡಲು ಸಿದ್ಧರಾಗಿದ್ದಾರೆ ಎಂದು ತಿಳಿಸಿದರು.

ಎಸ್ ಎಸ್ ಎಫ್ ರಾಜ್ಯ ಕಾರ್ಯದರ್ಶಿ ಹಜರತ್ ನವಾಜ್ ಮೌನಿ ಮಾತನಾಡಿ ಸರ್ವ ಜನಾಂಗದ ಶಾಂತಿಯ ತೋಟ ಮಲ್ಲಿಗೆ ನಾಡಿನ ಸಮಾಜದಲ್ಲಿ ಶಾಂತಿ ನೆಮ್ಮದಿ ನೆಲಸಲು ಸೌಹಾರ್ದ ವೇದಿಕೆ ನಿರಂತರವಾಗಿ ಕೆಲಸ ಮಾಡಲಿ ಎಂದು ತಿಳಿಸಿದರು.

ಕಾಮ್ರೇಡ್ ಎಚ್ ಎಂ ಸಂತೋಷ್ ಮಾತನಾಡಿ ಸೌಹಾರ್ದತೆ ಕಾಪಾಡಲು ಈ ತರದ ಜಾಥಾದ ಅವಶ್ಯಕತೆ ಇದೆ ಎಂದರು.

ಮುಖಂಡರಾದ ಎಚ್ ಪೂಜಪ್ಪ, ಶಿವಕುಮಾರ್ ಗೌಡ, ಉಚ್ಚಂಗೆಪ್ಪ,ಕಾಗದ ಗೌಸ್ ಮೊಹಿದ್ದೀನ್,ಶ್ರೀಧರ್ ನಾಯ್ಕ್, ಅಂಗನವಾಡಿ ಅಧ್ಯಕ್ಷೆ ಬಿ ಜಯಲಕ್ಷ್ಮಿ ಇತರರು ಸಭೆ ಉದ್ದೇಶಿಸಿ ಮಾತನಾಡಿದರು.

ಫಾ ಸೆಲ್ವ ಕುಮಾರ್, ಫಾ ಪ್ರಕಾಶ್ ರೆಬೆಲ್ಲೋ, ಫಾ ಪ್ರಕಾಶ್ ನಾಯ್ಕ್ ವಿವಿಧ ಸಮಾಜದ ಮುಖಂಡರಾದ ಅಟವಾಳಗಿ ಕೊಟ್ರೇಶ್, ಇರ್ಫಾನ್ ಮುದಗಲ್ ಕೋಡಿಹಳ್ಳಿ ಮುದುಕಪ್ಪ, ಎಲ್ ಜಿ ಹೊನ್ನಪ್ಪನವರ್, ಡಾ ಫಣಿರಾಜ, ಸಿದ್ದೇಶ್, ಬಿ ಎಲ್ ಶ್ರೀಧರ್, ವಸಂತ್,ಸುಬಾನ್ ಸಾಬ್, ರೈತ ಸಂಘದ ಸಿದ್ದಪ್ಪ ಹೊಸಮನಿ

ಹೊಳಗುಂದಿ ಸುರೇಶ ಗಂಟಿ ಮಲ್ಲಿಕಾರ್ಜುನ ತೋ ಮ ಶಂಕ್ರಯ್ಯ ಎಲ್ ಖಾದರ್ ಬಾಷಾ ಇತರರು ಉಪಸ್ಥಿತರಿದ್ದರು.

ಸೌಹಾರ್ದ ನಡಿಗೆ ಸಂಚಾಲಕರಾದ ಎಂ ದಯಾನಂದ ಹಲಗಿ ಸುರೇಶ ನವಲಿ ಶಶಿಧರ ಸುರೇಶ ಅಂಗಡಿ ಇದ್ದರು.

ಮದಲಗಟ್ಟಿ ವೃತ್ತದಿಂದ ಸೌಹಾರ್ದ ನಡಿಗೆ ಜಾಥಾ ಮುಖ್ಯ ರಸ್ತೆ ಮೂಲಕ ಲಾಲ್ ಬಹದ್ದೂರ್ ಶಾಸ್ತ್ರಿ ವೃತ್ತ ತಲುಪಿತು.

# ದಸರಾ ಕವಿಗೋಷ್ಠಿಗೆ ಕವಿ ಇಸ್ಮಾಯಿಲ್ ಎಲಿಗಾರ್ ಆಯ್ಕೆ



ವರದಿ :ಡಿ.ಪರಶುರಾಮಪ್ಪ

ಹೂವಿನಹಡಗಲಿ: ಪ್ರಗತಿಪರ ಚಿಂತನೆಯ ಕವಿ, ಬರೆಹಗಾರ, ಮಾತುಗಾರ ಹಾಗೂ ಜನ ಸಂಸ್ಕೃತಿಯ ದನಿಯಾಗಿರುವ ಇಸ್ಮಾಯಿಲ್ ಯಲಿಗಾರ ಮೈಸೂರಿನ ಐತಿಹಾಸಿಕ ದಸರಾ ಉತ್ಸವದ ಕವಿಗೋಷ್ಠಿಗೆ ಆಯ್ಕೆಯಾಗಿದ್ದಾರೆ.

"ಪ್ರಿಯ ನೆಲವೇ" ಮತ್ತು "ಸುಳ್ಳುಗಳ ಮಾರುಕಟ್ಟೆಯಲ್ಲಿ" ಕಾವ್ಯ ಸಂಕಲನಗಳನ್ನು ಲೋಕಾರ್ಪಣೆಗೊಳಿಸಿರುತ್ತಾರೆ.

ಪ್ರಧಾನ ಕವಿಗೋಷ್ಠಿಯಲ್ಲಿ ಭಾಗವಹಿಸುತ್ತಿರುವುದು ಅತ್ಯಂತ ಸಂತಸದ ಸಂಗತಿ.

ಅಭಿನಂದನೆ:ಹರಪನಹಳ್ಳಿ ಯ ಜನದನಿ ಸಾಹಿತ್ಯ ವೇದಿಕೆಯ ಡಿ. ರಾಮನಮಲಿ ಹಿರಿಯ ಲೇಖಕರು, ಗಂಗಾಧರ ಸಿ, ಪ್ರಗತಿಪರರು ಮತ್ತು ಮಾಡ್ಲಿಗೆರೆ ಸುಭದ್ರಮ್ಮ, ಸಾಹಿತಿಗಳು, ಶೇಖರ್ ನಾಯ್ಕ, ಕವಿಗಳು, ಬಂದೋಳ್ ದ್ದಪ್ಪ, ಶಿಕ್ಷಕರು ಹಡಗಲಿ ಸಿಂಚನ ಪ್ರಕಾಶನದ ಸವಿತಾ ಅಂಗಡಿ ಕರ್ನಾಟಕ ಪ್ರೆಸ್ ಕ್ಲಬ್ ನ ಗೌರವಾಧ್ಯಕ್ಷ ಎಂ ದಯಾನಂದ ಎ ಐ ಟಿ ಯು ಸಿ ಸಂಚಾಲಕ ಸುರೇಶ ಹಲಗಿ ಸಂಪಾದಕ ಬಿಚ್ಚುಗತ್ತಿ ಖಾಜಾ ಹುಸೇನ್ ಚು ಸಾ ಪ ಅಧ್ಯಕ್ಷ ನಾಗರಾಜ್ ಮಲ್ಕಿಒಡೆಯರ್ ಮುಂತಾದವರು ಅಭಿನಂದಿಸಿದ್ದಾರೆ.




ಮಂಗಳೂರು ಕಾಟಿಪಳ್ಳದ ವಿನಾಯಕ ಫ್ರೆಂಡ್ಸ್ ಮೂರನೇ ವಿಭಾಗ ಇದರ ಹತ್ತನೇ ವರ್ಷದ ಕಟೀಲು ಶ್ರೀ ದುರ್ಗಾಪರಮೇಶ್ವರಿ ದೇವಸ್ಥಾನಕ್ಕೆ ಭಕ್ತರ ಪಾದ ಯಾತ್ರೆಯು ಇದೆ11ನೇ ತಾರೀಕಿನಂದು ಶ್ರೀ ಕ್ಷೇತ್ರ–ಕ್ಕೆ ಪಾದಯಾತ್ರೆ ಹೊರಡಲಿರುವುದು ಆದಿತ್ಯವಾರ ಬೆಳಿಗ್ಗೆ 5ಗಂಟೆಗೆ ಮೂರನೇ ವಿಭಾಗದ ಕೋರ್ದಬ್ಬು ದೇವಸ್ಥಾನದ ವಿನಾಯಕ ಭಜನಾಮಂದಿರದಿಂದ ಹೊರಡಲಿದೆ ಈ ಪಾದಯಾತ್ರೆಯಲ್ಲಿ ಅನೇಕ ಭಕ್ತರು ಪಾಲ್ಗೊಳ್ಳಲಿರುವರು ವಿನಾಯಕ ಭಜನಾಮಂದಿರ ಅನೇಕ ಒಳ್ಳೆಯ ಕಾರ್ಯಕ್ರಮ ನೀಡುತ್ತಾ ಬಂದಿದೆ ನೀವು ಬನ್ನಿ ನಿಮ್ಮವರನ್ನು ಕರೆ ತನ್ನಿ ಅಮ್ಮನ ಕೃಪೆಗೆ ಪಾತ್ರರಾಗಿ

# ಕೆಟ್ಟು ನಿಂತ ಶುದ್ಧ ನೀರಿನ ಘಟಕ: ಟಿಬಿ ಬೋರ್ಡ್ ನಿರ್ಲಕ್ಷ್ಯಕ್ಕೆ ಪ್ರವಾಸಿಗರ ಆಕ್ರೋಶ

## ಮೂರು ರಾಜ್ಯಗಳಿಗೆ ನೀರುಣಿಸುವ ಟಿಬಿ ಡ್ಯಾಂನಲ್ಲೇ ಕುಡಿಯುವ ನೀರಿಗೆ ಹಾಹಾಕಾರ – ಪ್ರಾಣಿಗಳೂ ನೀರಿಗಾಗಿ ಪರದಾಟ



ಹೊಸಪೇಟೆ, 10– ಮೂರು ರಾಜ್ಯಗಳಿಗೆ ನೀರು ಪೂರೈಕೆ ಮಾಡುವ ತುಂಗಭದ್ರಾ ಜಲಾಶಯದ ಆಣೆಕಟ್ಟಿನಲ್ಲೇ ಕುಡಿಯುವ ನೀರಿಗೆ ಕೃತಕ ಅಭಾವ ಸೃಷ್ಟಿಯಾಗಿದೆ. ದೀಪದ ಕೆಳಗೆ ಕತ್ತಲು ಎಂಬಂತೆ ಲಕ್ಷಾಂತರ ಪ್ರವಾಸಿಗರು ಭೇಟಿ ನೀಡುವ ಈ ಪ್ರವಾಸಿ ತಾಣದಲ್ಲಿ ಕನಿಷ್ಠ ಮೂಲಭೂತ ಸೌಕರ್ಯಗಳೂ ಇಲ್ಲದೆ ಪ್ರವಾಸಿಗರು ಹಾಗೂ ಮೂಕ ಪ್ರಾಣಿಗಳು ಪರದಾಡುವಂತಾಗಿದೆ.

ಡ್ಯಾಂ ನೋಡಲು ಪ್ರತಿನಿತ್ಯ ಸಾವಿರಾರು ಪ್ರವಾಸಿಗರು ಬರುತ್ತಾರೆ. ಡ್ಯಾಂಗೆ ಎಂಟ್ರಿ ಆಗಬೇಕಾದರೆ ಪ್ರತಿ ಒಬ್ಬರು □10 ಪ್ರವೇಶ ಶುಲ್ಕ ಕೊಡಲೇಬೇಕು. ಆದರೆ ಹಣ ಕಟ್ಟಿದರೂ ಕುಡಿಯುವ ನೀರು, ಶೌಚಾಲಯದಂತಹ ಕನಿಷ್ಠ ಸೌಕರ್ಯವೂ ಇಲ್ಲ ಎಂದು ಪ್ರವಾಸಿಗರು ಆಕ್ರೋಶ ವ್ಯಕ್ತಪಡಿಸಿದ್ದಾರೆ.

ಡ್ಯಾಂ ಆವರಣದಲ್ಲಿ ಅಳವಡಿಸಿದ್ದ ಶುದ್ಧ ಕುಡಿಯುವ ನೀರಿನ ಘಟಕ ಕೆಟ್ಟು ನಿಂತಿದೆ. ಇದರಿಂದ ಡ್ಯಾಂಗೆ ಬಂದ ಸಾವಿರಾರು ಪ್ರವಾಸಿಗರಿಗೆ ಖಾಸಗಿ ಅಂಗಡಿಗಳೇ ಆಧಾರವಾಗಿವೆ. ನೀರಿನ ಬಾಟಲ್, ತಂಪು ಪಾನೀಯಗಳನ್ನು ದುಬಾರಿ ಬೆಲೆಗೆ ಖರೀದಿಸುವ ಅನಿವಾರ್ಯತೆ ಎದುರಾಗಿದೆ. ಇದರಲ್ಲೂ ಅಕ್ರಮ ನಡೆಯುತ್ತಿದೆಯಾ ಎಂಬ ಅನುಮಾನ ವ್ಯಕ್ತವಾಗುತ್ತಿದೆ.

ಬೃಹತ್ ಪಾರ್ಕ್ ಇದ್ದರೂ ಮೆಂಟೆನೆನ್ಸ್ ಮರೀಚಿಕೆಯಾಗಿದೆ. ಬೆಳೆದ ಹುಲ್ಲು, ಕಸದ ರಾಶಿ, ಮುರಿದು ಬಿದ್ದ ಆಟಿಕೆಗಳು ಪ್ರವಾಸಿಗರನ್ನು ಬೇಸರಗೊಳಿಸುತ್ತಿವೆ.

ಮೂಕ ಪ್ರಾಣಿಗಳಿಗೂ ನೀರಿಲ್ಲ: ಇನ್ನು ಮನುಷ್ಯರಿಗೆ ನೀರಿಲ್ಲ ಎನ್ನುವುದು ಒಂದು ಕಡೆಯಾದರೆ, ಮೂಕ ಪ್ರಾಣಿಗಳ ಸ್ಥಿತಿ ಇನ್ನೂ ಶೋಚನೀಯವಾಗಿದೆ. ಹೊಸಪೇಟೆ ಹೊರಭಾಗದಲ್ಲಿರುವ ತುಂಗಭದ್ರಾ ಜಲಾಶಯದ ಮೇಲ್ಭಾಗದಲ್ಲಿ ಸುಡು ಬಿಸಿಲಿನಲ್ಲಿ ಒಂದು ಮಂಗ ನೀರಿನ ದಾಹ ತೀರಿಸಿಕೊಳ್ಳಲು ಹರಸಾಹಸ ಪಡುತ್ತಿರುವ ದೃಶ್ಯ ಕಂಡುಬಂದಿದೆ. ನಲ್ಲಿಗೆ ಬಾಯಿ ಹಾಕಿ ನೀರು ಕುಡಿಯಲು ಮಂಗರಾಯ ಪರದಾಡುತ್ತಿರುವ ವಿಡಿಯೋ ನೋಡಿ ಪ್ರವಾಸಿಗರು ಮರುಗಿದ್ದಾರೆ.

"ಮನುಷ್ಯರಿಗೆ ವ್ಯವಸ್ಥೆ ಮಾಡದಿದ್ದರೂ ಪರವಾಗಿಲ್ಲ, ಕನಿಷ್ಠ ಮೂಕ ಪ್ರಾಣಿ–ಪಕ್ಷಿಗಳಿಗಾದರೂ ಕುಡಿಯಲು ನೀರಿನ ವ್ಯವಸ್ಥೆ ಮಾಡಬೇಕಿತ್ತು" ಎಂದು ಪ್ರವಾಸಿಗರು ಟಿಬಿ ಬೋರ್ಡ್ ಅಧಿಕಾರಿಗಳ ವಿರುದ್ಧ ಆಕ್ರೋಶ ಹೊರಹಾಕಿದ್ದಾರೆ.

ಮೂಲ ಸೌಕರ್ಯ ಕೊಡದೆ ಕೇವಲ ಪ್ರವೇಶ ಶುಲ್ಕ ವಸೂಲಿ ಮಾಡುತ್ತಿರುವ ತುಂಗಭದ್ರಾ ಮಂಡಳಿಯ ನಿರ್ಲಕ್ಷ್ಯ ಧೋರಣೆಯನ್ನು ಪ್ರವಾಸಿಗರು ಖಂಡಿಸಿದ್ದು, ಕೂಡಲೇ ಮೂಲಭೂತ ಸೌಕರ್ಯ ಕಲ್ಪಿಸಬೇಕೆಂದು ಆಗ್ರಹಿಸಿದ್ದಾರೆ.



# ಕನ್ನಡದ ಕಡಲತೀರದ ಭಾರ್ಗವ: ಡಾ. ಶಿವರಾಮ ಕಾರಂತ

## (ಅಕ್ಟೋಬರ್ 10, ಡಾ. ಶಿವರಾಮ ಕಾರಂತರ ಜನುಮದಿನ. ತನ್ನಿಮಿತ್ತ ಈ ಲೇಖನ)

ಕನ್ನಡ ಸಾಹಿತ್ಯ ಮತ್ತು ಸಂಸ್ಕೃತಿ ರಂಗಕ್ಕೆ ಸಾಟಿಯಿಲ್ಲದ ಕೊಡುಗೆ ನೀಡಿದ ಯುಗಪುರುಷ, 'ಕಡಲತೀರದ ಭಾರ್ಗವ' ಡಾ. ಕೋಟ ಶಿವರಾಮ ಕಾರಂತ. ಅವರು ಕೇವಲ ಒಬ್ಬ ಲೇಖಕರಷ್ಟೇ ಅಲ್ಲ; ಕಾದಂಬರಿಕಾರ, ನಾಟಕಕಾರ, ಪರಿಸರವಾದಿ, ಶಿಕ್ಷಣ ತಜ್ಞ, ಪತ್ರಕರ್ತ, ಜಾನಪದ ಸಂಶೋಧಕ ಹಾಗೂ ಚಿತ್ರಕಲಾವಿದರಾಗಿ ಬಹುಮುಖ ಪ್ರತಿಭೆಯನ್ನು ಮೈಗೂಡಿಸಿಕೊಂಡಿದ್ದ ಅಪರೂಪದ ವ್ಯಕ್ತಿತ್ವ.

ಆರಂಭಿಕ ಜೀವನ ಮತ್ತು ಹಿನ್ನೆಲೆ: : ಉಡುಪಿ ಜಿಲ್ಲೆಯ ಕೋಟದಲ್ಲಿ 1902ರ ಅಕ್ಟೋಬರ್ 10ರಂದು ಜನಿಸಿದ ಕಾರಂತರು, ತಮ್ಮ ಪ್ರಾಥಮಿಕ ಹಾಗೂ ಪ್ರೌಢಶಿಕ್ಷಣವನ್ನು ಕುಂದಾಪುರ ಮತ್ತು ಮಂಗಳೂರಿನಲ್ಲಿ ಮುಗಿಸಿದರು. ಗಾಂಧೀಜಿಯವರ ಅಸಹಕಾರ ಚಳವಳಿಯಿಂದ ಪ್ರಭಾವಿತರಾಗಿ ಕಾಲೇಜು ಶಿಕ್ಷಣವನ್ನು ತೊರೆದು ಸ್ವಾತಂತ್ರ್ಯ ಸಂಗ್ರಾಮಕ್ಕೆ ಧುಮುಕಿದರು. ಸಮಾಜ ಸೇವೆ, ಖಾದಿ ಪ್ರಚಾರ ಮತ್ತು ಗ್ರಾಮೀಣಾಭಿವೃದ್ಧಿ ಕಾರ್ಯಗಳಲ್ಲಿ ತೊಡಗಿಸಿಕೊಳ್ಳುವ ಮೂಲಕ ತಮ್ಮ ಸಾರ್ವಜನಿಕ ಜೀವನವನ್ನು ಆರಂಭಿಸಿದರು.

*ಡಾ. ಶಿವರಾಮ ಕಾರಂತ: ಸಾಹಿತ್ಯ, ಪ್ರಶಸ್ತಿಗಳು ಮತ್ತು ಯಕ್ಷಗಾನ ರಂಗದ ಸಾಧನೆ : ಕನ್ನಡ ಸಾಹಿತ್ಯ ಲೋಕದ 'ನಡೆದಾಡುವ ವಿಶ್ವಕೋಶ' ಎಂದೇ ಪ್ರಸಿದ್ಧರಾಗಿದ್ದ ಡಾ. ಶಿವರಾಮ ಕಾರಂತರು, ತಮ್ಮ ಸೃಜನಶೀಲತೆ ಮತ್ತು ವೈಚಾರಿಕತೆಯಿಂದ ಜ್ಞಾನಕ್ಷೇತ್ರದ ಹಲವು ಮಗ್ಗಲುಗಳನ್ನು ಬೆಳಗಿದವರು. ಅವರ ಪ್ರಮುಖ ಸಾಹಿತ್ಯಿಕ ಕೃತಿಗಳು, ಲಭಿಸಿದ ಗೌರವಗಳು ಮತ್ತು ಯಕ್ಷಗಾನ ಕಲೆಯ ಮೇಲಿನ ಅವರ ಅನನ್ಯ ಒಲವಿನ ವಿವರಗಳು ಇಲ್ಲಿವೆ:

1. ಪ್ರಮುಖ ಸಾಹಿತ್ಯಿಕ ಕೃತಿಗಳು : ಕಾರಂತರು ಕಾದಂಬರಿ, ನಾಟಕ, ಪ್ರಬಂಧ, ಕಥೆ, ಮಕ್ಕಳ ಸಾಹಿತ್ಯ, ವಿಜ್ಞಾನ ಹಾಗೂ ಕೋಶ ಸಾಹಿತ್ಯ ಸೇರಿದಂತೆ 400ಕ್ಕೂ ಹೆಚ್ಚು ಪುಸ್ತಕಗಳನ್ನು ರಚಿಸಿದ್ದಾರೆ.

* ಪ್ರಸಿದ್ಧ ಕಾದಂಬರಿಗಳು:

* ಮೂಕಜ್ಜಿಯ ಕನಸುಗಳು: ಮಾನವ ಸಂಸ್ಕೃತಿ, ನಂಬಿಕೆ ಹಾಗೂ ಧರ್ಮದ ವಿಕಾಸವನ್ನು ವೃದ್ಧೆ ಮೂಕಜ್ಜಿಯ ಅತೀಂದ್ರಿಯ ಗ್ರಹಿಕೆಯ ಮೂಲಕ ವಿಶ್ಲೇಷಿಸುವ ಅಪೂರ್ವ ತತ್ವಜ್ಞಾನದ ಕಾದಂಬರಿ.

* ಮರಳಿ ಮಣ್ಣಿಗೆ:ಕರಾವಳಿಯ ಮೂರು ತಲೆಮಾರುಗಳ ಕೌಟುಂಬಿಕ, ಸಾಮಾಜಿಕ ಮತ್ತು ಸಾಂಸ್ಕೃತಿಕ ಬದಲಾವಣೆಗಳನ್ನು ಹಾಗೂ ಮಣ್ಣಿನೊಂದಿಗಿನ ಸಂಬಂಧವನ್ನು ಚಿತ್ರಿಸುವ ಮಹಾಕೃತಿ.

* ಚೋಮನ ದುಡಿ: ಶೋಷಿತ ಚೋಮನ ಭೂಮಿಯ ಒಡೆತನದ ಕನಸು ಮತ್ತು ಅಸ್ಪೃಶ್ಯತೆಯ ಕಹಿ ವಾಸ್ತವವನ್ನು ತೆರೆದಿಡುವ ಹೃದಯಸ್ಪರ್ಶಿ ಕೃತಿ.

* ಬೆಟ್ಟದ ಜೀವ:*ಮಲೆನಾಡಿನ ಕಠಿಣ ಜೀವನ ಹಾಗೂ ನಿಸರ್ಗದೊಂದಿಗೆ ಮನುಷ್ಯ ನಡೆಸುವ ಸುದೀರ್ಘ ಹೋರಾಟದ ನೈಜ ಚಿತ್ರಣ.

* ಮೈಮನಗಳ ಸುಳಿಯಲ್ಲಿ, ಅಳಿದ ಮೇಲೆ, ಸರಸಮ್ಮನ ಸಮಾಧಿ, ಕುಡಿಯರ ಕೂಸು:* ಜೀವನದ ವಿಭಿನ್ನ ಆಯಾಮಗಳನ್ನು ಆಳವಾಗಿ ವಿಶ್ಲೇಷಿಸುವ ಇತರ ಜನಪ್ರಿಯ ಕಾದಂಬರಿಗಳು.

* ವಿಶ್ವಕೋಶಗಳು ಮತ್ತು ವಿಜ್ಞಾನ ಸಾಹಿತ್ಯ:

* ಬಾಲಪ್ರಪಂಚ (3 ಸಂಪುಟಗಳು):*ಮಕ್ಕಳಿಗೆ ಜ್ಞಾನದ ಬಾಗಿಲು ತೆರೆಯಲು ಏಕಾಂಗಿಯಾಗಿ ಸಿದ್ಧಪಡಿಸಿದ ಮಕ್ಕಳ ವಿಶ್ವಕೋಶ.



ಡಾ. ಪ್ರಸನ್ನ ದೇವರ ಮಠ
ಹೂವಿನಹಡಗಲಿ, ವಿಜಯನಗರ ಜಿಲ್ಲೆ

* ವಿಜ್ಞಾನ ಪ್ರಪಂಚ (4 ಸಂಪುಟಗಳು): ವಿಜ್ಞಾನದ ಸಂಕೀರ್ಣ ವಿಷಯಗಳನ್ನು ಸರಳ ಕನ್ನಡದಲ್ಲಿ ಪರಿಚಯಿಸಿದ ಬೃಹತ್ ಆಕರ ಗ್ರಂಥ.

* ಆತ್ಮಕಥೆ: : *ಹುಚ್ಚು ಮನಸ್ಸಿನ ಹತ್ತು ಮುಖಗಳು:* ತಮ್ಮ ಜೀವನದ ಅನುಭವಗಳು, ಪ್ರಯೋಗಗಳು ಮತ್ತು ವಿಚಾರಗಳನ್ನು ಮುಕ್ತವಾಗಿ ಹಂಚಿಕೊಂಡ ಅಪರೂಪದ ಆತ್ಮಕಥನ.

2. ಯಕ್ಷಗಾನದಲ್ಲಿನ ಒಲವು ಮತ್ತು ಕೊಡುಗೆ : ಕೋಟ ಶಿವರಾಮ ಕಾರಂತರಿಗೆ ಕರಾವಳಿಯ ಜಾನಪದ ಕಲೆ ಯಕ್ಷಗಾನದ ಮೇಲೆ ಅಪಾರ ಪ್ರೀತಿ ಹಾಗೂ ಕಾಳಜಿ ಇತ್ತು. ಸಾಂಪ್ರದಾಯಿಕ ಯಕ್ಷಗಾನವನ್ನು ಜಾಗತಿಕ ಮಟ್ಟಕ್ಕೆ ಎತ್ತರಿಸಲು ಅವರು ಮಾಡಿದ ಪ್ರಯೋಗಗಳು ಐತಿಹಾಸಿಕವಾದವು:

* *ಸಂಶೋಧನೆ ಮತ್ತು ಗ್ರಂಥ ರಚನೆ:* ಯಕ್ಷಗಾನದ ಶಾಸ್ತ್ರೀಯತೆ, ರಾಗಗಳು, ತಾಳಗಳು, ಮತ್ತು ಉಡುಗೆ ತೊಡುಗೆಗಳ ಕುರಿತು ದಶಕಗಳ ಕಾಲ ಸಂಶೋಧನೆ ನಡೆಸಿ *'ಯಕ್ಷಗಾನ ಬಯಲಾಟ'* ಎಂಬ ಪ್ರಮಾಣಿಕ ಗ್ರಂಥವನ್ನು ರಚಿಸಿದರು. ಈ ಗ್ರಂಥಕ್ಕೆ ಸ್ವೀಡನ್ನ ಸಾಹಿತ್ಯ ಸಂಸ್ಥೆಯಿಂದ ಪ್ರಶಸ್ತಿಯೂ ಲಭಿಸಿತು.

*'ಯಕ್ಷಗಾನ ರಂಗಪ್ರಸಂಗ' ಮತ್ತು ಪ್ರಯೋಗಗಳು: ಸಾಂಪ್ರದಾಯಿಕ ಕಾಲಮಿತಿಯಿಲ್ಲದ ಯಕ್ಷಗಾನವನ್ನು 2–3 ಗಂಟೆಗಳ ಕಾಲಮಿತಿಗೆ ತಂದರು. ಅನಗತ್ಯ ಮಾತಿನ ಚೌಕಟ್ಟನ್ನು ಕಡಿಮೆ ಮಾಡಿ, ರಂಗಚಲನೆ ಮತ್ತು ಗೀತೆಗೆ ಹೆಚ್ಚಿನ ಆದ್ಯತೆ ನೀಡಿದರು.

* 'ಯಕ್ಷಗಾನ ಬ್ಯಾಲೆ' (Yakshagana Ballet): ಮಾತೇ ಇಲ್ಲದೆ, ಕೇವಲ ಹಿನ್ನೆಲೆ ಸಂಗೀತ, ನೃತ್ಯ ಮತ್ತು ಹಾವಭಾವಗಳ ಮೂಲಕ ಕಥೆಯನ್ನು ಅಭಿವ್ಯಕ್ತಪಡಿಸುವ 'ಯಕ್ಷಗಾನ ಬ್ಯಾಲೆ' ರೂಪಿಸಿ ದೇಶ–ವಿದೇಶಗಳಲ್ಲಿ ಪ್ರದರ್ಶನಗಳನ್ನು ಆಯೋಜಿಸಿ ಈ ಕಲೆಗೆ ವಿಶ್ವಮಾನ್ಯತೆ ತಂದುಕೊಟ್ಟರು.

* ಆಹಾರ್ಯ ಮತ್ತು ವೇಷಭೂಷಣ ಪರಿಷ್ಕರಣೆ:ಸಾಂಪ್ರದಾಯಿಕ ಯಕ್ಷಗಾನದ ಬಣ್ಣಗಾರಿ–ಕೆ ಮತ್ತು ಉಡುಪುಗಳ ಮೂಲ ಸೌಂದರ್ಯಕ್ಕೆ ಧ–ಕ್ಕೆಯಾಗದಂತೆ ನೈಸರ್ಗಿಕ ಬಣ್ಣಗಳು ಮತ್ತು ಹಗುರವಾದ ವೇಷಭೂಷಣಗಳನ್ನು ಪರಿಚಯಿಸಿದರು.

3. ಪ್ರಮುಖ ಪ್ರಶಸ್ತಿ ಮತ್ತು ಗೌರವಗಳು : ಕನ್ನಡ ಸಾಹಿತ್ಯ, ಕಲೆ ಮತ್ತು ಸಮಾಜಸೇವೆಗೆ ನೀಡಿದ ಅನನ್ಯ ಕೊಡುಗೆಗಾಗಿ ಕಾರಂತರಿಗೆ ಸಾಲು ಸಾಲು ಪ್ರಶಸ್ತಿಗಳು ಒಲಿದುಬಂದವು:

* ಜ್ಞಾನಪೀಠ ಪ್ರಶಸ್ತಿ (1977): 'ಮೂಕಜ್ಜಿಯ ಕನಸುಗಳು' ಕಾದಂಬರಿಗೆ ಭಾರತದ ಅತ್ಯುನ್ನತ ಸಾಹಿತ್ಯ ಗೌರವ ಲಭಿಸಿತು.

* ಪದ್ಮಭೂಷಣ (1968): ಭಾರತ ಸರ್ಕಾರ ನೀಡಿದ ಈ ಗೌರವವನ್ನು, 1975ರಲ್ಲಿ ದೇಶದಲ್ಲಿ ಹೇರಲಾದ ತುರ್ತು ಪರಿಸ್ಥಿತಿಯನ್ನು (ಇಟಜಡಿಂಜಟಿಛಿಥಿ) ಪ್ರತಿಭಟಿಸಿ ಸರ್ಕಾರಕ್ಕೇ ಹಿಂತಿರುಗಿಸುವ ಮೂಲಕ ತಮ್ಮ ವೈಚಾರಿಕ ಬದ್ಧತೆಯನ್ನು ಮೆರೆದರು.

* ಕೇಂದ್ರ ಸಾಹಿತ್ಯ ಅಕಾಡೆಮಿ ಪ್ರಶಸ್ತಿ (1959): 'ಯಕ್ಷಗಾನ ಬಯಲಾಟ' ಸಂಶೋಧನಾ ಗ್ರಂಥಕ್ಕೆ ಲಭಿಸಿತು.

*ಪಂಪ ಪ್ರಶಸ್ತಿ (1989): ಕರ್ನಾಟಕ ಸರ್ಕಾರದ ಅತ್ಯುನ್ನತ ಸಾಹಿತ್ಯ ಪ್ರಶಸ್ತಿ.

*ಸಂಗೀತ ನಾಟಕ ಅಕಾಡೆಮಿ ಫೆಲೋಶಿಪ್: ಯಕ್ಷಗಾನ ರಂಗಭೂಮಿಗೆ ನೀಡಿದ ಸೇವೆಗಾಗಿ.

*ಗೌರವ ಡಾಕ್ಟರೇಟ್:* ಮೈಸೂರು, ಕರ್ನಾಟಕ್, ದೆಹಲಿ ಸೇರಿದಂತೆ ವಿವಿಧ ವಿಶ್ವವಿದ್ಯಾಲಯಗಳಿಂದ ಗೌರವ ಡಾಕ್ಟ–ರೇಟ್ ಪದವಿಗಳು ಲಭಿಸಿದವು.

ಸಾಹಿತ್ಯ, ಕಲೆ, ವಿಜ್ಞಾನ ಹಾಗೂ ಸಾಮಾಜಿಕ ಚಳವಳಿಗಳನ್ನು ಒಂದೇ ಬದುಕಿನಲ್ಲಿ ಸಮರ್ಥವಾಗಿ ನಿರ್ವಹಿಸಿದ ಶಿವರಾಮ ಕಾರಂತರು ನಿಜಕ್ಕೂ ಕನ್ನಡ ಸಾಹಿತ್ಯ ಲೋಕ ಕಂಡ ವಿಶಿಷ್ಟ ಮತ್ತು ಅಪರೂಪದ ಚೇತನ.

ತಮ್ಮ 95ನೆಯ ವಯಸ್ಸಿನಲ್ಲಿ (1997) ಇಹಲೋಕ ತ್ಯಜಿಸಿದ ಶಿವರಾಮ ಕಾರಂತರು, ತಮ್ಮ ಕೃತಿಗಳು ಹಾಗೂ ವಿಚಾರಗಳ ಮೂಲಕ ಕನ್ನಡ ನಾಡಿನಲ್ಲಿ ಎಂದಿಗೂ ಅಮರರಾಗಿದ್ದಾರೆ. ಕನ್ನಡ ಸಾಹಿತ್ಯ ಮತ್ತು ಜ್ಞಾನಲೋಕಕ್ಕೆ ಅವರು ನೀಡಿದ ಕೊಡುಗೆ ಚಿರಸ್ಮರಣೀಯ.



# ವಾರ್ಷಿಕೋತ್ಸವದ ಆಮಂತ್ರಣ ಪತ್ರಿಕೆ ಬಿಡುಗಡೆ



ಗದಗ, 10–ಕರುನಾಡು ಘರ್ಜನೆ ಕನ್ನಡ ಪತ್ರಿಕೆಯ 5ನೇ ವರ್ಷದ ವಾರ್ಷಿಕೋತ್ಸವದ ಅಂಗವಾಗಿ ಆಯೋಜಿಸಿರುವ ಕಾರ್ಯಕ್ರಮದ ಆಮಂತ್ರಣ ಪತ್ರಿಕೆಯನ್ನು ಜಗದ್ಗುರು ತೋಂಟದ ಸಿದ್ಧಲಿಂಗ ಸ್ವಾಮೀಜಿಗಳವರು ಬಿಡುಗಡೆ ಮಾಡಿದರು.

ಈ ಸಂದರ್ಭದಲ್ಲಿ ಕರುನಾಡು ಘರ್ಜನೆ ಪತ್ರಿಕೆ–ಯ ಸಂಪಾದಕರು ಹಾಗೂ ಸಿಬ್ಬಂದಿ ವರ್ಗದವರು ಜಗದ್ಗುರುಗಳ ಆಶೀರ್ವಾದ ಪಡೆದು, ಪತ್ರಿಕೆಯ 5ನೇ ವರ್ಷದ ವಾರ್ಷಿಕೋತ್ಸವದ ಕಾರ್ಯಕ್ರಮದ ಕುರಿತು ಮಾಹಿತಿ ನೀಡಿದರು.

ಕಳೆದ ಐದು ವರ್ಷಗಳಿಂದ ಕರುನಾಡು ಘರ್ಜನೆ ಪತ್ರಿ–ಕೆಯು ಸಾಮಾಜಿಕ, ಶೈಕ್ಷಣಿಕ, ಸಾಂಸ್ಕೃತಿಕ ಹಾಗೂ ಜನಪರ ವಿಷಯಗಳಿಗೆ ಧ್ವನಿಯಾಗಿ ಕಾರ್ಯನಿರ್ವಹಿಸುತ್ತಿದ್ದು, ಸಾರ್ವಜನಿಕರ ಸಮಸ್ಯೆಗಳನ್ನು ಸಂಬಂಧಿಸಿದ ಇಲಾಖೆಗಳ ಗಮನಕ್ಕೆ ತರುವ ನಿಟ್ಟಿನಲ್ಲಿ ನಿರಂತರವಾಗಿ ಶ್ರಮಿಸುತ್ತಿದೆ.

ವಾರ್ಷಿಕೋತ್ಸವದ ಅಂಗವಾಗಿ ವಿವಿಧ ಕಾರ್ಯಕ್ರಮಗಳನ್ನು ಆಯೋಜಿಸಲಾಗಿದ್ದು, ವಾಯ್ಸ್ ಆಫ್ ಗದಗ್ ? ಸೀಸನ್?1 ಸೇರಿದಂತೆ ಪ್ರತಿಭಾ ಪ್ರದರ್ಶನ ಹಾಗೂ ವಿವಿಧ ಕ್ಷೇತ್ರಗಳಲ್ಲಿ ಸಾಧನೆ ಮಾಡಿದ ಗಣ್ಯರನ್ನು ಸನ್ಮಾನಿಸುವ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳಲಾಗಿದೆ.

ಈ ಸಂದರ್ಭದಲ್ಲಿ ಮಾತನಾಡಿದ ಜಗದ್ಗುರು ತೋಂಟದ ಸಿದ್ಧಲಿಂಗ ಸ್ವಾಮೀಜಿಗಳವರು, ಪತ್ರಿಕೆಯು ಮುಂದಿನ ದಿನಗಳಲ್ಲಿಯೂ ಸಮಾಜಮುಖಿ ಹಾಗೂ ಜನಪರ ಕಾರ್ಯಗಳನ್ನು ಮುಂದುವರಿಸಲಿ ಎಂದು ಶುಭ ಹಾರೈಸಿದರು.

ಈ ಸಂದರ್ಭದಲ್ಲಿ ಕಾ, ನೀ.ಪ ಅಧ್ಯಕ್ಷರು ರಾಜೇಸಾಬ ಹೆಬ್ಬಳ್ಳಿ ಆನಂದಯ್ಯ ಯುರಕ್ತಮಠ ಕ,ಪ,ಕ್ಷೆ ಅಧ್ಯಕ್ಷರು ಮಂಜುನಾಥ್ ಮರಾಠೆ,ಶಿವಾನಂದ್ ತಮ್ಮಣ್ಣವರ ,ಮಂಜುನಾಥ್ ಆಸಂಗಿ, ಕಿರಣ್ ಭಜಂತ್ರಿ, ಚಿದಾನಂದ ಅನವಾಳ, ತೌಶಿಪ ಢಾಲಾಯತ, ರಾಹಿಲ್ ಮಕಾನದಾರ್, ಇಬ್ರಾಹಿಂ ದಾವಲಖಾನ, ನೌಶಾದ್ ಕಾತರಕಿ, ಜಿ,ಆರ್,ಕಟ್ಟಿಮನಿ ಕಾರ್ಯಕ್ರಮದಲ್ಲಿ ಪತ್ರಿಕೆ–ಯ ಸಂಪಾದಕರು, ಸಿಬ್ಬಂದಿ, ಅಭಿಮಾನಿಗಳು, ವಿವಿಧ ಕ್ಷೇತ್ರಗಳ ಗಣ್ಯರು ಹಾಗೂ ಹಿತೈಷಿಗಳು ಉಪಸ್ಥಿತರಿದ್ದರು.

# ಅಕ್ಟೋಬರ್ 11 ರಂದು ವಾಯ್ಸ್ ಆಫ್ ಗದಗ ಸೀಸನ್ ಆಡಿಷನ್

ಗದಗ, 10– ಕರ್ನಾಟಕದ ಸಂಗತಿ ಸ್ಪರ್ದಾಳುಗಳಿಗೆ ಸುವರ್ಣ ಅವಕಾಶ ಗದಗ: ಜಿಲ್ಲೆಯಲ್ಲಿರುವ ಗಾಯನ ಪ್ರತಿಭೆಗಳಿಗೆ ತಮ್ಮ ಪ್ರತಿಭೆಯನ್ನು ಪ್ರದರ್ಶಿಸಲು ವಿಶೇಷ ವೇದಿಕೆಯೊಂದು ಸಿದ್ಧವಾಗಿದ್ದು, "ವಾಯ್ಸ್ ಆಫ್ ಗದಗ್ ? ಸೀಸನ್ ಗಾಯನ ಸ್ಪರ್ಧೆಯನ್ನು ಆಯೋಜಿಸಲಾಗಿದೆ.

ಕರುನಾಡು ಘರ್ಜನೆ ಕನ್ನಡ ಪತ್ರಿಕೆ ಹಾಗೂ ಶರಾವತಿ ಕರೋಕೆ ಆರ್ಕೆಸ್ಟ್ರಾ ಸ್ಟುಡಿಯೋ, ಗದಗ ಇವರ ಸಂಯುಕ್ತ ಆಶ್ರಯದಲ್ಲಿ, ಕರುನಾಡು ಘರ್ಜನೆ ಪತ್ರಿಕೆಯ 5 ನೇ ವರ್ಷದ ವಾರ್ಷಿಕೋತ್ಸವದ ಅಂಗವಾಗಿ ಈ ಗಾಯನ ಸ್ಪರ್ಧೆಯನ್ನು ಹಮ್ಮಿಕೊಳ್ಳಲಾಗಿದೆ.

ಗದಗ ಜಿಲ್ಲೆಯ ವಿವಿಧ ಭಾಗಗಳಲ್ಲಿ ಗಾಯನ ಕ್ಷೇತ್ರದಲ್ಲಿ ಆಸಕ್ತಿ ಹೊಂದಿರುವ ಪ್ರತಿಭೆಗಳನ್ನು ಗುರುತಿಸಿ, ಅವರಿಗೆ ಸೂಕ್ತ ವೇದಿಕೆ ಕಲ್ಪಿಸುವ ಉದ್ದೇಶದಿಂದ ಸ್ಪರ್ಧೆಯನ್ನು ಆಯೋಜಿಸಲಾಗಿದೆ. ಸ್ಪರ್ಧೆಯಲ್ಲಿ ಆಫ್‌ಲೈನ್ ಹಾಗೂ ಆನ್‌ಲೈನ್ ಆಡಿಷನ್ ಮೂಲಕ ಭಾಗವಹಿಸುವ ಅವಕಾಶ ಕಲ್ಪಿಸಲಾಗಿದೆ.

ಅಕ್ಟೋಬರ್ 11 ರಂದು ಆಡಿಷನ್‌ವಾಯ್ಸ್ ಆಫ್ ಗದಗ್ ? ಸೀಸನ್?1" ಗಾಯನ ಸ್ಪರ್ಧೆಯ ಆಡಿಷನ್ 2026ರ ಅಕ್ಟೋಬರ್ 11 ರಂದು ಗದಗ ನಗರದ ಗಾಂಧಿ ಸರ್ಕಲ್ ಸಮೀಪದಲ್ಲಿರುವ ಕರುನಾಡು ಘರ್ಜನೆ ಪತ್ರಿಕೆ ಕಚೇರಿ ಹಾಗೂ ಶರಾವತಿ ಕರೋಕೆ ಆರ್ಕೆಸ್ಟ್ರಾ ಸ್ಟುಡಿಯೋದಲ್ಲಿ ನಡೆಯಲಿದೆ.

ಗಾಯನದಲ್ಲಿ ಆಸಕ್ತಿ ಹೊಂದಿರುವ ಜಿಲ್ಲೆಯ ಪ್ರತಿಭೆಗಳು ಆಡಿಷನ್‌ನಲ್ಲಿ ಭಾಗವಹಿಸಿ ತಮ್ಮ ಧ್ವನಿ ಹಾಗೂ ಗಾಯನ ಪ್ರತಿಭೆಯನ್ನು ಪ್ರದರ್ಶಿಸಬಹುದಾಗಿದೆ.

ವಿಜೇತರಿಗೆ ಆಕರ್ಷಕ ಬಹುಮಾನ

ಸ್ಪರ್ಧೆಯಲ್ಲಿ ಉತ್ತಮ ಪ್ರದರ್ಶನ ನೀಡುವ ವಿಜೇತರಿಗೆ ಆಕರ್ಷಕ ನಗದು ಬಹುಮಾನಗಳನ್ನು ನೀಡಲಾಗುತ್ತಿದ್ದು,

ಪ್ರಥಮ ಬಹುಮಾನ: 10,001
ದ್ವಿತೀಯ ಬಹುಮಾನ: 5,001
ತೃತೀಯ ಬಹುಮಾನ: 2,501

ಎಂದು ಆಯೋಜಕರು ತಿಳಿಸಿದ್ದಾರೆ.ಪ್ರವೇಶ ಶುಲ್ಕ 200ಸ್ಪರ್ಧೆಯಲ್ಲಿ ಭಾಗವಹಿಸಲು ಪ್ರವೇಶ ಶುಲ್ಕ ಕೇವಲ ?200 ನಿಗದಿಪಡಿಸಲಾಗಿದೆ. ಸಮಯ ಬೆಳಿಗ್ಗೆ 10 ಘಂಟೆ ಇಂದ ಸಂಜೆ 4 ವರಿಗೆ ಗಾಯನ ಕ್ಷೇತ್ರದಲ್ಲಿ ಆಸಕ್ತಿ ಹೊಂದಿರುವವರು ಹಾಗೂ ತಮ್ಮ ಪ್ರತಿಭೆಯನ್ನು ದೊಡ್ಡ ವೇದಿಕೆಯಲ್ಲಿ ಪ್ರದರ್ಶಿಸಲು ಬಯಸುವ ಕರ್ನಾಟಕದ ರಾಜ್ಯದ ಪ್ರತಿಭೆಗಳು ಈ ಅವಕಾಶವನ್ನು ಸದುಪಯೋಗಪಡಿಸಿಕೊಳ್ಳುವಂತೆ ಆಯೋಜಕರು ಮನವಿ ಮಾಡಿದ್ದಾರೆ.ನೋಂದಣಿ ಹಾಗೂ ಹೆಚ್ಚಿನ ಮಾಹಿತಿಗೆಸ್ಪರ್ಧೆಯಲ್ಲಿ ಭಾಗವಹಿಸಲು ಇಚ್ಛಿಸುವವರು ಹಾಗೂ ಹೆಚ್ಚಿನ ಮಾಹಿತಿಗಾಗಿ ಕೆಳಗಿನ ಮೊಬೈಲ್ ಸಂಖ್ಯೆಗೆ ಸಂಪರ್ಕಿಸಿ ನೋಂದಣಿ ಮಾಡಿಕೊಳ್ಳಬಹುದು.

8105756257996457896 6 9945865368

ಕರ್ನಾಟಕದ ಸುಪ್ತ ಗಾಯನ ಪ್ರತಿಭೆಗಳನ್ನು ಗುರುತಿಸಿ ಅವರಿಗೆ ಅವಕಾಶ ಕಲ್ಪಿಸುವ ನಿಟ್ಟಿನಲ್ಲಿ ಆಯೋಜಿಸಲಾಗಿರುವ "ವಾಯ್ಸ್ ಆಫ್ ಗದಗ್ ? ಸೀಸನ್1 ಗೆ ಜಿಲ್ಲೆಯ ಗಾಯನಾಸಕ್ತರಿಂದ ಉತ್ತಮ ಪ್ರತಿಕ್ರಿಯೆ ದೊರೆಯುವ ನಿರೀಕ್ಷೆ ವ್ಯಕ್ತವಾಗಿದೆ.

# ಬೆಂಬಲ ಬೆಲೆ ಯೋಜನೆಯಡಿಯಲ್ಲಿಎಫ್.ಎ.ಕ್ಯೂ ಗುಣಮಟ್ಟದ ಸೋಯಾಬಿನ್ ಹುಟ್ಟುವಳಿ ಖರೀದಿಗೆ ಬೆಂಬಲ ಬೆಲೆ ನಿಗದಿ

ಗದಗ, 10– 2026–27 ನೇ ಸಾಲಿನ ಕೇಂದ್ರ ಸರ್ಕಾರದ ಬೆಂಬಲ ಬೆಲೆ ಯೋಜನೆಯಡಿಯಲ್ಲಿ ಎಫ್.ಎ.ಕ್ಯೂ ಗುಣಮಟ್ಟದ ಸೋಯಾಬಿನ್ ಹುಟ್ಟುವಳಿ ಖರೀದಿಸಲು ಬೆಂಬಲ ಬೆಲೆ ನಿಗದಿಪಡಿಸಲಾಗಿದೆ. ನೋಂದಣಿ ಪ್ರಕ್ರಿಯೆಯಲ್ಲಿ ರೈತರು ಹೆಚ್ಚಿನ ಸಂಖ್ಯೆಯಲ್ಲಿ ಭಾಗವಹಿಸುವಂತೆ ಕ್ರಮ ಕೈಗೊಳ್ಳಬೇಕೆಂದು ಜಿಲ್ಲಾಧಿಕಾರಿ ಸಿ.ಎನ್.ಶ್ರೀಧರ್ ಅವರು ತಿಳಿಸಿದರು.



ಗದಗ ಜಿಲ್ಲಾಧಿಕಾರಿಗಳ ಕಚೇರಿ ಸಭಾಂಗಣದಲ್ಲಿ ಶನಿವಾರ 2026–27 ನೇ ಸಾಲಿನ ಕನಿಷ್ಟ ಬೆಂಬಲ ಬೆಲೆ ಯೋಜನೆಯಡಿಯಲ್ಲಿ ಸೋಯಾಬಿನ್ ಖರೀದಿಸುವ ಕುರಿತು ಜಿಲ್ಲಾ ಟಾಸ್ಕ್ ಫೋರ್ಸ ಸಮಿತಿಯ ಅಧ್ಯಕ್ಷತೆ ವಹಿಸಿ ಅವರು ಮಾತನಾಡಿದರು.

ಜಿಲ್ಲೆಯಲ್ಲಿ ತೆರೆಯಲಾಗುವ ಸೋಯಾಬಿನ್ ಹುಟ್ಟುವಳಿ ಖರೀದಿ ಕೇಂದ್ರಗಳಲ್ಲಿ ಖರೀದಿಸಲಾಗುವ ಎಫ್. ಎ ಕ್ಯೂ ಗುಣಮಟ್ಟ ಪರಿಶೀಲನೆಗೆ ಗ್ರೇಡರ್‌ಗಳನ್ನು ನೇಮಕ ಮಾಡಬೇಕು ಮತ್ತು ಅವರಿಗೆ ಎಫ್ಎಕ್ಯೂ ಗ್ರೇಡಿಂಗ್ ತರಬೇತಿ ನೀಡಬೇಕು. ಜಿಲ್ಲೆಯ ಪ್ರತಿ ರೈತರಿಂದ ಪ್ರತಿ ಎಕರೆಗೆ 05 ಕ್ವಿಂಟಾಲ್ ಗರಿಷ್ಟ ಪ್ರಮಾಣ ಹಾಗೂ ಪ್ರತಿ ರೈತರಿಂದ ಗರಿಷ್ಟ 25 ಕ್ವಿಂಟಾಲ್ ಸೋಯಾಬಿನ್ ಖರೀದಿಸಬೇಕು. ಸರ್ಕಾರದ ಬೆಂಬಲ ಬೆಲೆಯಲ್ಲಿ ಸೋಯಾಬಿನ್ ಹುಟ್ಟುವಳಿ ಖರೀದಿಯ ಕುರಿತು ರೈತರಿಗೆ ತಿಳುವಳಿಕೆ ನೀಡಲು ವ್ಯಾಪಕ ಪ್ರಚಾರ ಕೈಗೊಳ್ಳಬೇಕು ಹಾಗೂ ಜಿಲ್ಲೆಯ ರೈತರು ಈ ಯೋಜನೆಯ ಲಾಭ ಪಡೆಯಲು ಅನುಕೂಲವಾಗುವಂತೆ ಕ್ರಮ ವಹಿಸಬೇಕೆಂದು ಜಿಲ್ಲಾಕಾರಿ ಸಿ.ಎನ್.ಶ್ರೀಧರ್ ಸೂಚಿಸಿದರು.

ಕೃಷಿ ಮಾರಾಟ ಇಲಾಖೆಯ ಸಹಾಯಕ ನಿರ್ದೇಶಕರಾದ ಸುಧಾ ಆರ್ ಬಂಡಿ ಅವರು ಮಾತನಾಡಿ ಎಫ್.ಎ.ಕ್ಯೂ ಗುಣಮಟ್ಟದ ಸೋಯಾಬಿನ್ ಹುಟ್ಟುವಳಿಗೆ ಪ್ರತಿ ಕ್ವಿಂಟಾಲ್‌ಗೆ 5,708 ರೂ ಗಳಂತೆ ನಿಗದಿಪಡಿಸಲಾಗಿದೆ. ಕೇಂದ್ರ ಸರ್ಕಾರದ ಬೆಂಬಲ ಬೆಲೆ ಮಾರ್ಗಸೂಚಿಗಳನ್ವಯ ಸರ್ಕಾರದ ಆದೇಶದನುಸಾರ ನ್ಯಾಫೆಡ್ ಸಂಸ್ಥೆ ಹಾಗೂ ಎನ್.ಸಿ.ಸಿ.ಎಫ್. ಸಂಸ್ಥೆಯನ್ನು ಕೇಂದ್ರದ ಖರೀದಿ ಏಜೆನ್ಸಿಯಾಗಿ ಹಾಗೂ ಕರ್ನಾಟಕ ಸಹಕಾರ ಎಣ್ಣೆ ಬೀಜ ಬೆಳೆಗಾರರ ಮಹಾಮಂಡಳಿ ನಿಯಮಿತ ( ಕೆ ಓ ಎಫ್ ) ಬೆಂಗಳೂರು ಇವರನ್ನು ರಾಜ್ಯ ಮಟ್ಟದ ಖರೀದಿ ಏಜನ್ಸಿಯನ್ನಾಗಿ ನೇಮಿಸಿದ್ದು ಸರ್ಕಾರದ ಆದೇಶದ ದಿನಾಂಕದಿಂದ ರೈತರ ನೋಂದಣಿ ಕಾಲಾವಧಿಯನ್ನು 80 ದಿನಗಳವರೆಗೆ ಹಾಗೂ ಖರೀದಿ ಅವಧಿಯನ್ನು 90 ದಿನಗಳವರೆಗೆ ನಿಗದಿಪಡಿಸಿದ್ದು, ನೋಂದಣಿ ಕಾರ್ಯದ ಜೊತೆಗೆ ಖರೀದಿ ಪ್ರಕ್ರಿಯೆಯನ್ನು ಸಹ ಪ್ರಾರಂಭಿಸಲು ಆದೇಶಿಸಿದೆ ಎಂದರು.

ಜಿಲ್ಲೆಯ 09 ಕಡೆಗಳಲ್ಲಿ ಖರೀದಿ ಕೇಂದ್ರಗಳನ್ನು ತೆರೆಯಲು ತೀರ್ಮಾನಿಸಲಾಯಿತು.

ಸಭೆಯಲ್ಲಿ ಕೃಷಿ ಇಲಾಖೆ, ಆಹಾರ ಮತ್ತು ನಾಗರಿಕ ಸರಬರಾಜು ಇಲಾಖೆ, ತೋಟಗಾರಿಕೆ ಇಲಾಖೆ, ಸಹಕಾರಿ ಸಂಘಗಳ ಇಲಾಖೆ ಸೇರಿದಂತೆ ವಿವಿಧ ಇಲಾಖೆ ಅಧಿಕಾರಿಗಳು ಹಾಜರಿದ್ದರು.

# ನಗರದ ವಿವಿಧೆಡೆ ನೀರು ಪೂರೈಕೆ

ಗದಗ, 10– ಗದಗ ಬೆಟಗೇರಿ ಅವಳಿ ನಗರದ ಸಾರ್ವಜನಿಕರಿಗೆ ತಿಳಿಸುವುದೇನೆಂದರೆ. ದಿನಾಂಕ:10–10–2026 ರಂದು ಈ ಕೆಳಗಿನ ಸ್ಥಳಗಳಿಗೆ ನೀರು ಪೂರೈಕೆ ಮಾಡಲಾಗುವುದು.

ಸ್ಥಳಗಳ ವಿವರ: ವಾರ್ಡ ನಂ:08,09 ಹಾಗೂ 10ರಲ್ಲಿ 24*7 ಹೆಲ್ಥ ಕ್ಯಾಂಪ್ ಲೈನ್, ನವೋದಯ ಆಫೀಸ್ ಲೈನ್, ಮಸೂತಿ ಲೈನ್, ಮಜ್ಜಿಗೆ ಓಣಿ, ಕಬಾಡಿ ರೋಡ್ ಲೈನ್, ತೆಗ್ಗಿನ ಪೇಟ್, ಪಿ ಬಿ ರೋಡ್ ಕಲಬುರ್ಗಿ ಓಣಿ, ಕರಿಸಿದ್ದಿಮಠ ಲೈನ್, ಕಂಗೋರಿ ಓಣಿ, ಹದ್ದನ ಸರ್ ಲೈನ್, ಶಿರಹಟ್ಟಿ ಓಣಿ, ಬೋರೆಗಾರ ಓಣಿ ಲೈನ್, ವಾರ್ಡ ನಂ:29ರಲ್ಲಿ ಡಂಬಳ ಇವರ ಲೈನ್, ಮಸೂತಿ ಕೆಳಗಿ ಭಾಗ, ಮೇಲಿನ ಭಾಗ, ವಾರ್ಡ ನಂ:27ರಲ್ಲಿ ಕೆ ಎಚ್ ಪಾಟೀಲ ಬಡಾವಣೆ ಮತ್ತು ವೀರನಾರಾಯಣ ಬಡಾವಣೆ ವಾರ್ಡ ನಂ:21 ಹಾಗೂ 23 ಕಮತಾರ ಪ್ಲಾಟ ಮುನವಳ್ಳಿ ಇವರ ಪ್ಲಾಟ ಲೈನ್, ಯಲಿಗಾರ, ಭಾಗ–1–2 ಗುರುಬಸವ ಲೈನ್, ಗೆಳೆಯವರ ಬಳಗ ಹೊಸ ಲೈನ್, ಕರಿಯಪ್ಪ ಲೈನ್, ನಾಗಪ್ಪನ ಕಟ್ಟಿ ಲೈನ್, ಪಾಟೀಲರ ಲೈನ್, ಮಡಿವಾಳರ ಲೈನ್, ಜಂತ್ಲಿಯವರ ಲೈನ್, ವಾರ್ಡ ನಂ:16,18 ಹಾಗೂ 29ರಲ್ಲಿ ಮಡಿವಾಳ ದೇವಸ್ಥಾನ ಲೈನ್, ಕಂಬಾರ ಓಣಿ ಭಾಗ–1 ಭಾಗ–2, ಬಾಗಲಕೋಟಿ ಇವರ ಲೈನ್, ಅಂಬೇಡ್ಕರ ನಗರ, ಕೋನೆರಿ ಹೊಂಡ್ ಹೊಸ ಲೈನ್, ಡೋರಗಲ್ಲಿ ಲೈನ್, ಹನಮಂತ ದೇವರ ಗುಡಿ ಲೈನ್, ವಾರ್ಡ ನಂ:22ರಲ್ಲಿ ಗಂಗಿಮಡಿ ನಿಂಗಪ್ಪರ ಲೈನ್, ಸಪಾರಿಯವರ ಲೈನ್, ರಿಯಾಜ್ ದೇಸಾಯಿ ಕಾಂಬಳೆ ಇವರ ಲೈನ್, ಉಗ್ಗಿಯರ್ ಲೈನ್, ಸ್ವಾಮಿಯರ್ ಲೈನ್, ಗಾರ್ಡನ್ ಹತ್ತಿರ ಪಿ.ಸಿ.ಸಿ ಲೈನ್, ವಾರ್ಡ ನಂ:34ರಲ್ಲಿ ನಂದಿಶ್ವರ ನಗರ ಲೈನ್, ವಾರ್ಡ ನಂ:33ರಲ್ಲಿ ಆರ್ ಕೆ ನಗರ, ರೆಡ್ಡಿ ಖಾನಾವಳಿ ಲೈನ್ ದೇಸಾತಿ ಡಾಕ್ಟರ್ ಲೈನ್ ಹನುಮಂತ ಗುಡಿ ಹಿಂದಿನ ಭಾಗ ಲೈನ್, ವಾರ್ಡ ನಂ:35ರಲ್ಲಿ ವೀರೇಶ್ವರ ನಗರ ಲೈನ್.

ತಾಂತ್ರಿಕವಾಗಿ ನೀರು ಪೂರೈಕೆಯಲ್ಲಿ ಒಂದು ವೇಳೆ ಅಡತಡೆಯಾದಲ್ಲಿ ಸಾರ್ವಜನಿಕರು ನಗರಸಭೆಯೊಂದಿಗೆ ಸಹಕರಿಸಲು ಗದಗ ಬೆಟಗೇರಿ ನಗರಸಭೆ ಪೌರಾಯುಕ್ತರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

# ಬಿತ್ತನೆ ಬೀಜಗಳ ಪೂರ್ಣ ದರ ಹಾಗೂ ರಿಯಾಯತಿ ದರಗಳ ವಿವರ

ಗದಗ,10– 2026–27 ನೇ ಸಾಲಿನ ಹಿಂಗಾರು ಹಂಗಾಮು ಪ್ರಾರಂಭವಾಗಿದ್ದು, ಜಿಲ್ಲೆಯ ಹಿಂಗಾರು ಹಂಗಾಮಿನ ಪ್ರಮುಖ ಬೆಳೆಗಳಾದ ಕಡಲೆ, ಜೋಳ, ಶೇಂಗಾ ಹಾಗೂ ಗೋದಿ ಬಿತ್ತನೆ ಬೀಜಗಳನ್ನು ರೈತ ಸಂಪರ್ಕ ಕೇಂದ್ರ ಹಾಗೂ ಹೆಚ್ಚುವರಿ ಬೀಜ ವಿತರಣಾ ಕೇಂದ್ರಗಳ ಮುಖಾಂತರ ರಿಯಾಯತಿ ದರದಲ್ಲಿ ಎಲ್ಲ ವರ್ಗದ ರೈತರಿಗೆ ಗರಿಷ್ಟ 5 ಎಕರೆ ಅಥವಾ ರೈತರ ಹಿಡುವಳಿಗೆ ಅನುಗುಣವಾಗಿ ವಿತರಿಸಲಾಗುತ್ತಿದೆ. ಜಿಲ್ಲೆಗೆ ಅವಶ್ಯವಿರುವ ವಿವಿಧ ಬೆಳೆಗಳ ಬಿತ್ತನೆ ಬೀಜಗಳನ್ನು ದಾಸ್ತಾನು ಮಾಡಿಕೊಳ್ಳಲಾಗಿದ್ದು, ಯಾವುದೇ ಬೆಳೆಯ ಬಿತ್ತನೆ ಬೀಜದ ಕೊರತೆ ಇರುವುದಿಲ್ಲ.

ವಿವಿಧ ಬಿತ್ತನೆ ಬೀಜಗಳ ಪೂರ್ಣ ದರ ಹಾಗೂ ರಿಯಾಯತಿ ದರಗಳು ಕೆ ಜಿಗೆ ಈ ಕೆಳಗಿನಂತೆ ಇವೆ.

ಕಡಲೆ ಬೆಳೆ – ಪೂರ್ಣ ದರ 90 ರೂ. ಇದ್ದು ರಿಯಾಯತಿ ದರ ಸಾಮಾನ್ಯ ವರ್ಗದವರಿಗೆ 25 ರೂ, ಪ.ಜಾ./ಪ.ಪಂ. ದವರಿಗೆ 37.50 ರೂ; ಜೋಳ – ಪೂರ್ಣ ದರ 68.50 ರೂ. ಇದ್ದು ರಿಯಾಯತಿ ದರ ಸಾಮಾನ್ಯ ವರ್ಗದವರಿಗೆ 20 ರೂ , ಪ.ಜಾ/ ಪ.ಪಂ. ದವರಿಗೆ 30 ರೂ; ಗೋಧಿ – ಪೂರ್ಣ ದರ 77.50 ರೂ ಇದ್ದು ರಿಯಾಯತಿ ದರ ಸಾಮಾನ್ಯ ವರ್ಗ 15 ರೂ, ಪ. ಜಾ/ ಪ.ಪಂ. ದವರಿಗೆ 22.50 ರೂ ಹಾಗೂ ಶೇಂಗಾ ಬೆಳೆ – ಪೂರ್ಣ ದರ 125 ರೂ ಇದ್ದು ರಿಯಾಯತಿ ದರ ಸಾಮಾನ್ಯ ವರ್ಗದವರಿಗೆ 19 ರೂ. ಹಾಗೂ ಪ.ಪಂ. ದ ವರಿಗೆ 28.50 ರೂ. ಇರುತ್ತದೆ.

ಹಿಂಗಾರು ಹಂಗಾಮಿನಲ್ಲಿ ಈವರಗೆ ಮಳೆಯಾಗದೇ ಇರುವ ಕಾರಣ ಮಣ್ಣಿನಲ್ಲಿ ತೇವಾಂಶದ ಕೊರತೆ ಇರುತ್ತದೆ. ಯಾವುದೇ ಬೆಳೆಯನ್ನು ಬಿತ್ತನೆ ಮಾಡುವ ಮೊದಲು ಮಣ್ಣಿನಲ್ಲಿ ತೇವಾಂಶದ ಲಭ್ಯತೆಯನ್ನು ಖಚಿತಪಡಿಸಿಕೊಂಡು ಬಿತ್ತನೆ ಕೈಗೊಳ್ಳಲು ಜಂಟಿ ಕೃಷಿ ನಿರ್ದೇಶಕರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

# ಮುಕ್ಕಣ್ಣೇಶ್ವರ ಮಠದಲ್ಲಿ ಶ್ರೀದೇವಿ ಪುರಾಣ

ಗದಗ, 10– ಸದ್ಗುರು ಮುಕ್ಕಣ್ಣೇಶ್ವರ ಮಠದಲ್ಲಿ ನವರಾತ್ರಿ ಅಂಗವಾಗಿ ದಿ. 11–10–2026 ರಿಂದ ದಿನಾಂಕ 21–10–2026 ರ ವರೆಗೆ ಹತ್ತು ದಿನಗಳ ಪರ್ಯಂತ ಶ್ರೀದೇವಿ ಪುರಾಣ ಕಾರ್ಯಕ್ರಮ ಜರುಗುವುದು. 11–10–2026 ರಂದು ಸಾಯಂಕಾಲ 6 ಗಂಟೆಗೆ ಮಠದ ಪೀಠಾಧಿಪತಿಗಳಾದ ಸದ್ಗುರು ಶಂಕರಾನಂದ ಮಹಾಸ್ವಾಮಿಗಳ ದಿವ್ಯ ಸಾನಿಧ್ಯದಲ್ಲಿ ಶ್ರೀಮಠದಲ್ಲಿ ಘಟಸ್ಥಾಪನ ಕಾರ್ಯಕ್ರಮ ಮತ್ತು ನೂತನವಾಗಿ ದೇವಿ ಮೂರ್ತಿಗೆ ಸತೀಶ ಓಂಕಾರಭಟ್ ಇವರ ನೇತೃತ್ವದಲ್ಲಿ ಅಭಿಷೇಕ ಮಹಾ ಮಂಗಳಾರತಿ ನೆರವೇರುವುದು. ತದನಂತರ ಶ್ರೀಗಳಿಂದ ಶ್ರೀ ದೇವಿಪುರಾಣ ಪಾರಾಯಣ ನೆರವೇರುವುದು. ಮತ್ತು ಶರಣರಾದ ಶ್ರೀ ಮಲ್ಲೇಶಪ್ಪ ಅಣ್ಣಿಗೇರಿ ಇವರಿಂದ ಶ್ರೀದೇವಿ ಪುರಾಣ ಪ್ರವಚನ ಹಾಗೂ ಧಾರ್ಮಿಕ ಕಾರ್ಯಕ್ರಮಗಳು ಜರುಗುವವು. ಕುಮಾರಿ ಐಶ್ವರ್ಯ ಹೂಲಿ ಸಂಗೀತ ಕಾರ್ಯಕ್ರಮ ಹಾರ್ಮೋನಿಯಂ ಶ್ರೀಕಾಂತ ಹೂಲಿ, ತಬಲಾ ಸಾಥ ಶಿವಶಂಕರ ದೊಡ್ಡಮನಿ ನೀಡಲಿದ್ದಾರೆ. ಆದ ಕಾರಣ ಎಲ್ಲ ಸದ್ಭಕ್ತರು ಶ್ರೀಮಠಕ್ಕೆ ಆಗಮಿಸಿ ಶ್ರೀ ದೇವಿ ಪುರಾಣ ಶ್ರವಣ ಮಾಡಿ ಪ್ರಸಾದ ಸ್ವೀಕರಿಸಿ ದೇವಿ ಕೃಪೆಗೆ ಪಾತ್ರರಾಗಬೇಕೆಂದು ಮುಕ್ಕಣ್ಣೇಶ್ವರ ಸೇವಾ ಸಮಿತಿಯವರು ವಿನಂತಿಸಿದ್ದಾರೆ.

# ಕಿತ್ತೂರು ರಾಣಿ ಚೆನ್ನಮ್ಮ ಜಯಂತಿಯ ಕುರಿತು ಪೂರ್ವಭಾವಿ ಸಭೆ

ಗದಗ,10– ದಿನಾಂಕ 11.10.2026 ರವಿವಾರ ಬೆಳಗ್ಗೆ 10 ಗಂಟೆಗೆ ನಗರದ ಮುಳಗುಂದ ರಸ್ತೆಯಲ್ಲಿರುವ ಅಗಸ್ತ್ಯ ಇನ್ ಹೋಟೆಲ್ ನಲ್ಲಿ ವೀರಮಾತೆ ರಾಣಿ ಚೆನ್ನಮ್ಮ ಜಯಂತಿ ಆಚರಿಸುವ ಕುರಿತು ಪಂಚಮಸಾಲಿ ಸಮಾಜ ಬಾಂಧವರ ಸಭೆ ಕರೆಯಲಾಗಿದೆ ಆದ್ದರಿಂದ ಗದಗ ಬೆಟಗೇರಿ ಹಾಗೂ ಸುತ್ತಮುತ್ತಲಿನ ಎಲ್ಲಾ ಗ್ರಾಮಗಳ ಹಿರಿಯರು ಯುವಕರು ಹಾಗೂ ಮಹಿಳೆಯರು ಸಮಾಜದ ಹಾಲಿ ಮಾಜಿ ಜನಪ್ರತಿನಿಧಿಗಳು ಸಮಾಜದ ಎಲ್ಲಾ ಟ್ರಸ್ಟಿನ ಸದಸ್ಯರುಗಳು ಬ್ಯಾಂಕಿನ ನಿರ್ದೇಶಕರುಗಳು ಎರಡು ಪೀಠಗಳ ಅಧ್ಯಕ್ಷರು ಪದಾಧಿಕಾರಿಗಳು ಹಾಗೂ ಸಮಾಜ ಬಾಂಧವರು ಈ ಸಭೆಗೆ ಆಗಮಿಸಿ ಸಲಹೆ ಸೂಚನೆ ನೀಡಿ ಯಶಸ್ವಿಗೊಳಿಸಬೇಕಾಗಿ ಪಂಚಮಸಾಲಿ ಸಮಾಜ ಬಾಂಧವರು ವಿನಂತಿಸಿದ್ದಾರೆ.




# ವಾರದ ರಾಶಿ ಫಲ

## 11 ಅಕ್ಟೋಬರ್ ರಿಂದ 18 ಅಕ್ಟೋಬರ್ 2026 ರವರೆಗೆ

### ಮೇಷರಾಶಿ



ಈ ವಾರ ನಿಮ್ಮ ಕೆಲಸಗಳಲ್ಲಿ ಉತ್ಸಾಹ ಮತ್ತು ಆತ್ಮವಿಶ್ವಾಸ ಹೆಚ್ಚಾಗಲಿದೆ. ಉದ್ಯೋಗದಲ್ಲಿ ಹೊಸ ಜವಾಬ್ದಾರಿಗಳು ದೊರೆಯುವ ಸಾಧ್ಯತೆ ಇದೆ. ಹಣಕಾಸಿನ ವಿಚಾರದಲ್ಲಿ ಅನಗತ್ಯ ಖರ್ಚುಗಳಿಗೆ ಕಡಿವಾಣ ಹಾಕುವುದು ಉತ್ತಮ. ಕುಟುಂಬದಲ್ಲಿ ಶಾಂತಿ ಕಾಪಾಡಿಕೊಂಡು, ಕೋಪವನ್ನು ನಿಯಂತ್ರಿಸುವುದರಿಂದ ಉತ್ತಮ ಫಲಿತಾಂಶ ಸಿಗಲಿದೆ.

### ವೃಷಭರಾಶಿ



ಈ ವಾರ ನಿಮ್ಮ ಪ್ರಯತ್ನಗಳಿಗೆ ಉತ್ತಮ ಪ್ರತಿಕ್ರಿಯೆ ದೊರೆಯಬಹುದು. ಉದ್ಯೋಗ ಮತ್ತು ವ್ಯಾಪಾರದಲ್ಲಿ ತಾಳ್ಮೆಯಿಂದ ನಿರ್ಧಾರಗಳನ್ನು ತೆಗೆದುಕೊಳ್ಳಿ. ಹಣ ಉಳಿತಾಯ ಮಾಡಲು ಮತ್ತು ಹಳೆಯ ಹಣಕಾಸಿನ ಯೋಜನೆಗಳನ್ನು ಪರಿಶೀಲಿಸಲು ಇದು ಸೂಕ್ತ ಸಮಯ. ಕುಟುಂಬದವರೊಂದಿಗೆ ಸಂತೋಷದ ಕ್ಷಣಗಳನ್ನು ಕಳೆಯುವ ಅವಕಾಶ ಸಿಗಲಿದೆ.

### ಮಿಥುನರಾಶಿ



ಈ ವಾರ ಹೊಸ ವಿಚಾರಗಳನ್ನು ಕಲಿಯಲು ಮತ್ತು ಹೊಸ ಸಂಪರ್ಕಗಳನ್ನು ಬೆಳೆಸಲು ಅನುಕೂಲಕರವಾಗಿರಬಹುದು. ಉದ್ಯೋಗದಲ್ಲಿ ನಿಮ್ಮ ಮಾತಿನ ಕೌಶಲ್ಯದಿಂದ ಉತ್ತಮ ಅವಕಾಶಗಳು ದೊರೆಯಬಹುದು. ವ್ಯಾಪಾರದಲ್ಲಿ ಆತುರದ ನಿರ್ಧಾರಗಳನ್ನು ತಪ್ಪಿಸಿ, ಹಣಕಾಸಿನ ವ್ಯವಹಾರಗಳಲ್ಲಿ ಎಚ್ಚರಿಕೆ ವಹಿಸಿ. ಸ್ನೇಹಿತರು ಮತ್ತು ಬಂಧುಗಳೊಂದಿಗೆ ಮಾತನಾಡುವಾಗ ಸ್ಪಷ್ಟತೆ ಹಾಗೂ ಸೌಜನ್ಯ ಕಾಪಾಡಿಕೊಳ್ಳಿ.

### ಕರ್ಕಾಟಕರಾಶಿ



ಈ ವಾರ ನಿಮ್ಮ ವೈಯಕ್ತಿಕ ಮತ್ತು ವೃತ್ತಿಪರ ಜೀವನದಲ್ಲಿ ಸಮತೋಲನ ಕಾಪಾಡಿಕೊಳ್ಳುವುದು ಮುಖ್ಯ. ಉದ್ಯೋಗದಲ್ಲಿ ಕೆಲವು ಸವಾಲುಗಳು ಎದುರಾದರೂ ತಾಳ್ಮೆಯಿಂದ ಪರಿಹಾರ ಕಂಡುಕೊಳ್ಳಬಹುದು. ಆದಾಯ ಮತ್ತು ಖರ್ಚುಗಳನ್ನು ಸರಿಯಾಗಿ ನಿರ್ವಹಿಸುವುದು ಆರ್ಥಿಕ ಸ್ಥಿರತೆಗೆ ಸಹಾಯ ಮಾಡುತ್ತದೆ. ಕುಟುಂಬದವರ ಭಾವನೆಗಳನ್ನು ಅರ್ಥಮಾಡಿಕೊಂಡು ನಡೆದುಕೊಂಡರೆ ಸಂಬಂಧಗಳಲ್ಲಿ ಆತ್ಮೀಯತೆ ಹೆಚ್ಚಾಗಲಿದೆ.

### ಸಿಂಹರಾಶಿ



ಈ ವಾರ ನಿಮ್ಮ ನಾಯಕತ್ವ ಗುಣಗಳು ಮತ್ತು ಆತ್ಮವಿಶ್ವಾಸಕ್ಕೆ ಮಹತ್ವ ದೊರೆಯಬಹುದು. ಉದ್ಯೋಗದಲ್ಲಿ ನಿಮ್ಮ ಕೆಲಸವನ್ನು ಮೇಲಧಿಕಾರಿಗಳು ಗಮನಿಸುವ ಸಾಧ್ಯತೆ ಇದೆ. ವ್ಯಾಪಾರದಲ್ಲಿ ಹೊಸ ಯೋಜನೆಗಳನ್ನು ರೂಪಿಸುವಾಗ ಅನುಭವಿಗಳ ಸಲಹೆ ಪಡೆಯಿರಿ. ಕುಟುಂಬದಲ್ಲಿ ಸಂತೋಷದ ವಾತಾವರಣ ನಿರ್ಮಿಸಲು ನಿಮ್ಮ ಮಾತು ಮತ್ತು ನಡವಳಿಕೆಯಲ್ಲಿ ಮೃದುತ್ವ ಇರಲಿ.

### ಕನ್ಯಾರಾಶಿ



ಈ ವಾರ ಯೋಜಿತವಾಗಿ ಕೆಲಸ ಮಾಡುವುದರಿಂದ ಉತ್ತಮ ಪ್ರಗತಿ ಸಾಧಿಸಬಹುದು. ಉದ್ಯೋಗದಲ್ಲಿ ಬಾಕಿ ಉಳಿದ ಕೆಲಸಗಳನ್ನು ಪೂರ್ಣಗೊಳಿಸಲು ಪ್ರಯತ್ನಿಸಿ. ಹಣಕಾಸಿನ ವಿಚಾರದಲ್ಲಿ ದಾಖಲೆಗಳನ್ನು ಪರಿಶೀಲಿಸಿ, ಅನಗತ್ಯ ಖರೀದಿಗಳನ್ನು ಮುಂದೂಡುವುದು ಒಳಿತು. ಆರೋಗ್ಯದ ಕಡೆ ಗಮನ ನೀಡಿ, ವಿಶ್ರಾಂತಿ ಮತ್ತು ಆಹಾರ ಕ್ರಮದಲ್ಲಿ ನಿಯಮಿತತೆ ಕಾಪಾಡಿಕೊಳ್ಳಿ.

### ತುಲಾರಾಶಿ



ಈ ವಾರ ಸಂಬಂಧಗಳು ಮತ್ತು ಪಾಲುದಾರಿಕೆಯಲ್ಲಿ ಸಮನ್ವಯ ಸಾಧಿಸಲು ಅವಕಾಶ ದೊರೆಯಬಹುದು. ಉದ್ಯೋಗದಲ್ಲಿ ಸಹೋದ್ಯೋಗಿಗಳ ಸಹಕಾರದಿಂದ ಕೆಲವು ಕೆಲಸಗಳು ಸುಲಭವಾಗಿ ಪೂರ್ಣಗೊಳ್ಳಬಹುದು. ಹಣಕಾಸಿನ ವಿಚಾರದಲ್ಲಿ ಹೊಸ ಹೂಡಿಕೆ ಮಾಡುವ ಮೊದಲು ಅದರ ಅಪಾಯಗಳನ್ನು ಪರಿಶೀಲಿಸಿ. ದಾಂಪತ್ಯ ಜೀವನದಲ್ಲಿ ಪರಸ್ಪರ ಗೌರವ ಮತ್ತು ಮುಕ್ತ ಸಂಭಾಷಣೆಯಿಂದ ಸಂತೋಷ ಹೆಚ್ಚಾಗಲಿದೆ.

### ವೃಶ್ಚಿಕರಾಶಿ



ಈ ವಾರ ನಿಮ್ಮ ಗುರಿಗಳ ಕಡೆಗೆ ದೃಢನಿಶ್ಚಯದಿಂದ ಸಾಗಲು ಪ್ರಯತ್ನಿಸಿ. ಉದ್ಯೋಗದಲ್ಲಿ ರಹಸ್ಯವಾಗಿಟ್ಟುಕೊಳ್ಳಬೇಕಾದ ಮಾಹಿತಿಯನ್ನು ಎಚ್ಚರಿಕೆಯಿಂದ ನಿರ್ವಹಿಸಿ. ಸಾಲ ಮತ್ತು ಹಣಕಾಸಿನ ವ್ಯವಹಾರಗಳಲ್ಲಿ ಆತುರದ ನಿರ್ಧಾರಗಳನ್ನು ತೆಗೆದುಕೊಳ್ಳಬೇಡಿ. ಕುಟುಂಬದಲ್ಲಿ ಅನಗತ್ಯ ಅನುಮಾನಗಳನ್ನು ಬಿಟ್ಟು ವಿಶ್ವಾಸದಿಂದ ನಡೆದುಕೊಂಡರೆ ಮನಸ್ಸಿಗೆ ನೆಮ್ಮದಿ ದೊ-ರೆಯುತ್ತದೆ.

### ಧನುರಾಶಿ



ಈ ವಾರ ಹೊಸ ಅವಕಾಶಗಳನ್ನು ಅನ್ವೇಷಿಸಲು ಮತ್ತು ನಿಮ್ಮ ಜ್ಞಾನವನ್ನು ವಿಸ್ತರಿಸಲು ಅನುಕೂಲವಾಗಬಹುದು. ಉದ್ಯೋಗ ಅಥವಾ ವ್ಯಾಪಾರದಲ್ಲಿ ಭವಿಷ್ಯದ ಬೆಳವಣಿಗೆಗಾಗಿ ಯೋಜನೆ ರೂಪಿಸಿ. ಪ್ರಯಾಣ ಅಥವಾ ಶಿಕ್ಷಣಕ್ಕೆ ಸಂಬಂಧಿಸಿದ ಖರ್ಚುಗಳನ್ನು ಮುಂಚಿತವಾಗಿ ಲೆಕ್ಕ ಹಾಕಿಕೊಳ್ಳಿ. ಕುಟುಂಬದವರೊಂದಿಗೆ ಸಮಯ ಕಳೆಯುವುದರಿಂದ ಸಂತೋಷ ಮತ್ತು ಮಾನಸಿಕ ನೆಮ್ಮದಿ ಹೆಚ್ಚಾಗಲಿದೆ.

### ಮಕರರಾಶಿ



ಈ ವಾರ ಶಿಸ್ತು ಮತ್ತು ನಿರಂತರ ಪ್ರಯತ್ನಗಳು ನಿಮ್ಮ ಪ್ರಗತಿಗೆ ನೆರವಾಗಲಿವೆ. ಉದ್ಯೋಗದಲ್ಲಿ ಜವಾಬ್ದಾರಿಗಳನ್ನು ಸಮಯಕ್ಕೆ ಸರಿಯಾಗಿ ನಿರ್ವಹಿಸುವುದು ಉತ್ತಮ ಫಲಿತಾಂಶಕ್ಕೆ ಸಹಾಯ ಮಾಡುತ್ತದೆ. ಹಣಕಾಸಿನ ವಿಚಾರದಲ್ಲಿ ದೀರ್ಘಕಾಲದ ಉಳಿತಾಯಕ್ಕೆ ಆದ್ಯತೆ ನೀಡಿ. ಕುಟುಂಬದ ಹಿರಿಯರ ಸಲಹೆಗಳನ್ನು ಗೌರವಿಸಿ ಮತ್ತು ಆರೋಗ್ಯಕ್ಕಾಗಿ ವಿಶ್ರಾಂತಿಗೆ ಸಮಯ ಮೀಸಲಿಡಿ.

### ಕುಂಭರಾಶಿ



ಈ ವಾರ ಹೊಸ ಆಲೋಚನೆಗಳು ಮತ್ತು ಸೃಜನಶೀಲ ಪ್ರಯತ್ನಗಳಿಗೆ ಉತ್ತೇಜನ ದೊರೆಯಬಹುದು. ಉದ್ಯೋಗದಲ್ಲಿ ತಂಡದೊಂದಿಗೆ ಕೆಲಸ ಮಾಡುವಾಗ ನಿಮ್ಮ ಅಭಿಪ್ರಾಯಗಳನ್ನು ಸ್ಪಷ್ಟವಾಗಿ ವ್ಯಕ್ತಪಡಿಸಿ. ವ್ಯಾಪಾರದಲ್ಲಿ ಹೊಸ ಅವಕಾಶಗಳನ್ನು ಪರಿಶೀಲಿಸಿದರೂ ಒಪ್ಪಂದಗಳನ್ನು ಸಂಪೂರ್ಣವಾಗಿ ಓದಿದ ನಂತರವೇ ಮುಂದುವರಿಯಿರಿ. ಸ್ನೇಹಿತರು ಮತ್ತು ಕುಟುಂಬದವರೊಂದಿಗೆ ಉತ್ತಮ ಸಂಬಂಧ ಕಾಪಾಡಿಕೊಳ್ಳುವುದರಿಂದ ಮನಸ್ಸಿಗೆ ಸಂತೋಷ ಸಿಗಲಿದೆ.

### ಮೀನರಾಶಿ



ಈ ವಾರ ನಿಮ್ಮ ಅಂತಃಪ್ರಜ್ಞೆ ಮತ್ತು ಅನುಭವವನ್ನು ಸರಿಯಾದ ರೀತಿಯಲ್ಲಿ ಬಳಸಿಕೊಳ್ಳಿ. ಉದ್ಯೋಗದಲ್ಲಿ ಕೆಲಸಗಳನ್ನು ಮುಂದೂಡದೆ ಕ್ರಮಬದ್ಧವಾಗಿ ಪೂರ್ಣಗೊಳಿಸುವುದು ಒಳಿತು. ಹಣಕಾಸಿನ ವಿಚಾರದಲ್ಲಿ ಇತರರಿಗೆ ಹಣ ನೀಡುವ ಮೊದಲು ನಿಮ್ಮ ಸಾಮರ್ಥ್ಯವನ್ನು ಪರಿಶೀಲಿಸಿ. ಧ್ಯಾನ, ಪ್ರಾರ್ಥನೆ ಮತ್ತು ಕುಟುಂಬದವರೊಂದಿಗೆ ಶಾಂತವಾಗಿ ಸಮಯ ಕಳೆಯುವುದು ಮಾನಸಿಕ ನೆಮ್ಮದಿಗೆ ಸಹಾಯ ಮಾಡಬಹುದು.

**ಶುಭ ವಾರದ ಸಂದೇಶ: ನಿಮ್ಮ ಪರಿಶ್ರಮ, ತಾಳ್ಮೆ, ವಿವೇಕ ಮತ್ತು ಸಕಾರಾತ್ಮಕ ಚಿಂತನೆಗಳು ಉತ್ತಮ ನಿರ್ಧಾರಗಳನ್ನು ತೆಗೆದುಕೊಳ್ಳಲು ಸಹಾಯ ಮಾಡಲಿ.**



**ಸೂಚನೆ: ಇದು ಸಾಮಾನ್ಯ ರಾಶಿ ಆಧಾರಿತ ವಾರದ ಫಲವಾಗಿದೆ. ವೈಯಕ್ತಿಕ ಜನ್ಮಜಾತಕ ಮತ್ತು ಗ್ರಹಗಳ ನಿಖರ ಸ್ಥಿತಿಯನ್ನು ಆಧರಿಸಿದ ಫಲಿತಾಂಶಗಳು ಬದಲಾಗಬಹುದು.**

-ಶ್ರೀ ಸಾಗರ ಜೋಶಿ
ಶ್ರೀ ಗುರುದತ್ತ ಅಸ್ಟ್ರೋ, ವಾಸ್ತು, ಮತ್ತು ರೇಕಿ ಚಿಕಿತ್ಸೆ ಕೇಂದ್ರ ಬೆಳಗಾವಿ.
ಮೊ: 8951527989

# ಜಿಲ್ಲಾ ಮಟ್ಟದ ಯುವ ಸಂಸತ್ತು ಕಾರ್ಯಕ್ರಮದ ಕುರಿತು ಪೂರ್ವ ಸಿದ್ಧತೆ ಸಭೆ

## ಯುವ ಸಂಸತ್ ಕಾರ್ಯಕ್ರಮ: ಪಾರದರ್ಶಕ ಆಯ್ಕೆ ಹಾಗೂ ಮೌಲ್ಯಮಾಪನಕ್ಕೆ ಜಿಲ್ಲಾಧಿಕಾರಿ ಸಿ.ಎನ್. ಶ್ರೀಧರ್ ಕರೆ



ಗದಗ, 10- ಅಂತರಾಷ್ಟ್ರೀಯ ಪ್ರಜಾಪ್ರಭುತ್ವ ದಿನಾಚರಣೆ-ಯ ಹಿನ್ನೆಲೆಯಲ್ಲಿ ಯುವ ಸಂಸತ್ ಕಾರ್ಯಕ್ರಮದಲ್ಲಿ ಭಾಗವಹಿಸುವ ವಿದ್ಯಾರ್ಥಿಗಳಿಗೆ ಸಂಸದೀಯ ನಡವಳಿಕೆ, ವಿಧಾನಸಭೆ ಮತ್ತು ಸಂಸತ್ತಿನ ಕಾರ್ಯಕಲಾಪಗಳ ಬಗ್ಗೆ ಸ್ಪಷ್ಟ ಅರಿವು ಇರಬೇಕು. ಯಾವುದೇ ರೀತಿಯ ತಾರತಮ್ಯಕ್ಕೆ ಆಸ್ಪದ ನೀಡದೆ, ಪಾರದರ್ಶಕವಾಗಿ ಚೀಟಿ ಎತ್ತುವ ಮೂಲಕವೇ ಪ್ರಮುಖ ಪಾತ್ರಗಳನ್ನು (ಆಡಳಿತ ಪಕ್ಷ, ವಿರೋಧ ಪಕ್ಷ, ಮಾರ್ಷಲ್ ಇತ್ಯಾದಿ) ಹಂಚಿಕೆ ಮಾಡಬೇಕು. ಇದರಿಂದ ಪ್ರತಿಯೊಬ್ಬ ವಿದ್ಯಾರ್ಥಿಗೂ ಸಮಾನ ಅವಕಾಶ ಸಿಗುತ್ತದೆ" ಎಂದು ಜಿಲ್ಲಾಧಿಕಾರಿ ಸಿ. ಎನ್. ಶ್ರೀಧರ ತಿಳಿಸಿದರು.

ಅವರು ನಗರದ ಜಿಲ್ಲಾಧಿಕಾರಿಗಳ ಕಚೇರಿ ಸಭಾಂಗಣದಲ್ಲಿ ಶುಕ್ರವಾರ ಅಕ್ಟೋಬರ್ (9) ರಂದು ಜರುಗಿದ ಅಂತರಾಷ್ಟ್ರೀಯ ಪ್ರಜಾಪ್ರಭುತ್ವ ದಿನಾಚರಣೆಯ ಹಿನ್ನೆಲೆಯಲ್ಲಿ ಜಿಲ್ಲಾ ಮಟ್ಟದ ಯುವ ಸಂಸತ್ತು ಕಾರ್ಯಕ್ರಮ ಪೂರ್ವ ಸಿದ್ಧತೆ ಕುರಿತು ಸಭೆಯ ಅಧ್ಯಕ್ಷತೆ ವಹಿಸಿ ಮಾತನಾಡಿದರು.

ವಿದ್ಯಾರ್ಥಿಗಳ ಪ್ರಸ್ತುತಿ, ವಿಷಯ ಮಂಡನೆ ಮತ್ತು ಸಕ್ರಿಯ ಭಾಗವಹಿಸುವಿಕೆಯನ್ನು ನಿಖರವಾಗಿ ಮೌಲ್ಯಮಾಪನ ಮಾಡಲು ಉಪನ್ಯಾಸಕರು ಹಾಗೂ ಸಮಿತಿಯ ಸದಸ್ಯರನ್ನೊಳಗೊಂಡ ತಜ್ಞರ ಮೌಲ್ಯಮಾಪನ ತಂಡವನ್ನು ರಚಿಸಬೇಕು. ಈ ತಂಡವು ಕಲಾಪವನ್ನು ನಿಗಾವಹಿಸಿ ಅತ್ಯುತ್ತಮವಾಗಿ ಪ್ರದರ್ಶನ ನೀಡುವ ವಿದ್ಯಾರ್ಥಿಗಳನ್ನು ಜಿಲ್ಲಾ ಮಟ್ಟದಿಂದ ಮುಂದಿನ ಹಂತಕ್ಕೆ ಆಯ್ಕೆ ಮಾಡಲಿದೆ" ಎಂದರು.

ಅದಲ್ಲದೆ, ನೈಜ ಶಾಸಕರಂತೆ ವಿದ್ಯಾರ್ಥಿಗಳು ಕಲಾಪದಲ್ಲಿ ಭಾಗವಹಿಸಲು ಅನುಕೂಲವಾಗುವಂತೆ ಮುಂಚಿತವಾಗಿಯೇ ಸೂಕ್ತ ತರಬೇತಿ ಹಾಗೂ 'ಅಭ್ಯಾಸ ಕಲಾಪ' ನಡೆಸುವುದು ಅತ್ಯಗತ್ಯ. ಚರ್ಚೆಗೆ ನೀಡುವ ವಿಷಯಗಳು ವಿದ್ಯಾರ್ಥಿಗಳ ವಯಸ್ಸಿಗೆ ಹಾಗೂ ಜ್ಞಾನಕ್ಕೆ ಸೂಕ್ತವಾಗಿರಬೇಕು" ಎಂದರು.

ಪಾರದರ್ಶಕ ಪಾತ್ರ ಹಂಚಿಕೆ : ವಿದ್ಯಾರ್ಥಿಗಳನ್ನು ಲಾಟರಿ/ಚೀಟಿ ಎತ್ತುವ ಮೂಲಕ ಆಡಳಿತ ಪಕ್ಷ ಮತ್ತು ವಿರೋಧ ಪಕ್ಷಗಳಾಗಿ ವಿಂಗಡಿಸುವುದು.

ಆಡಳಿತ ಮತ್ತು ವಿರೋಧ ಪಕ್ಷದ ಸದಸ್ಯರೇ ಚರ್ಚಿಸಿ ತಮ್ಮ ನಾಯಕರನ್ನು (ಸಿಎಂ, ವಿರೋಧ ಪಕ್ಷದ ನಾಯಕ ಇತ್ಯಾದಿ) ಪ್ರಜಾಸತ್ತಾತ್ಮಕವಾಗಿ ಆಯ್ಕೆ ಮಾಡಿಕೊಳ್ಳುವುದು ಎಂದು ನಿರ್ದೇಶನ ನೀಡಿದರು.

ಕಲಾಪದಲ್ಲಿ ಭಾಗವಹಿಸುವ ಪ್ರತಿಯೊಬ್ಬ ವಿದ್ಯಾರ್ಥಿಯ ವಿಷಯ ಮಂಡನೆ, ಹಾವಭಾವ ಹಾಗೂ ಸಕ್ರಿಯತೆಯನ್ನು ಗಮನಿಸಿ ಅಂಕ ನೀಡಲು ತಜ್ಞ ಉಪನ್ಯಾಸಕರು ಮತ್ತು ಸಮಿತಿ ಸದಸ್ಯರನ್ನೊಳಗೊಂಡ ವಿಶೇಷ ಮೌಲ್ಯಮಾಪನ ತಂಡವನ್ನು ರಚಿಸಲಾಗುತ್ತದೆ ಎಂದು ಹೇಳಿದರು.

ಅಂತಿಮ ಕಾರ್ಯಕ್ರಮಕ್ಕೂ ಮುನ್ನ ಓರಿಯಂಟೇಶನ್ ತರಬೇತಿ ಮತ್ತು ಅಭ್ಯಾಸ ಕಲಾಪಗಳನ್ನು ನಡೆಸಲಾಗುತ್ತದೆ.

ವಿದ್ಯಾರ್ಥಿಗಳಲ್ಲಿ ಸಾರ್ವಜನಿಕ ನೀತಿ ಹಾಗೂ ಸಂಸದೀಯ ವ್ಯವಸ್ಥೆಯ ಅರಿವು ಮೂಡಿಸಲು ವಿವಾದಾತ್ಮಕವಲ್ಲದ ಪ್ರಚಲಿತ ವಿಷಯಗಳನ್ನು ಚರ್ಚೆಗೆ ನೀಡಲಾಗುತ್ತದೆ ಎಂದು ಜಿಲ್ಲಾಧಿಕಾರಿ ಸಿ. ಎನ್. ಶ್ರೀಧರ ಅಧಿಕಾರಿಗಳಿಗೆ ಸೂಚಿಸಿದರು.

ಜಿಲ್ಲಾ ಪಂಚಾಯತ್ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ ಮುಕುಲ್ ಜೈನ್ ಅವರು ಮಾತನಾಡಿ, ಯುವ ಸಂಸತ್ ಕಾರ್ಯಕ್ರಮದ ರೂಪುರೇಷೆಗಳ ಬಗ್ಗೆ ವಿವರಿಸಿ, ಡಿಗ್ರಿ, ಸ್ನಾತಕೋತ್ತರ ಹಾಗೂ ಕಾನೂನು ಕಾಲೇಜುಗಳ ವಿದ್ಯಾರ್ಥಿಗಳಿಗೆ ಈ ಕಾರ್ಯಕ್ರಮದಲ್ಲಿ ಹೆಚ್ಚಿನ ಆದ್ಯತೆ ನೀಡಲಾಗುತ್ತಿದೆ. ನೈಜ ವಿಧಾನ ಸೌಧದ ವಾತಾವರಣವನ್ನು ಮರುಸೃಷ್ಟಿಸಲು ಸೂಕ್ತವಾದ ಸಭಾಂಗಣ, ಸ್ಪೀಕರ್ ಆಸನ, ಮಾಧ್ಯಮ ಗ್ಯಾಲರಿ ಹಾಗೂ ಪ್ರೇಕ್ಷಕರ ಗ್ಯಾಲರಿಗಳನ್ನು ವ್ಯವಸ್ಥೆಗೊಳಿಸಲಾಗುವುದು" ಎಂದು ಸಭೆಯಲ್ಲಿ ತಿಳಿಸಿದರು.

ನ್ಯಾಯವಾದಿ ಗುರುರಾಜ ಅವರು ಮಾತನಾಡಿ, ಯುವ ಸಂಸತ್‌ನಲ್ಲಿ ಭಾಗವಹಿಸುವ ವಿದ್ಯಾರ್ಥಿಗಳಿಗೆ ಶಾಸನ ರಚನೆ, ಜೀರೋ ಅವರ್ (ಶೂನ್ಯ ವೇಳೆ) ಹಾಗೂ ಸಂಸದೀಯ ನಿಯಮಗಳ ಕುರಿತು ನೀಡಬೇಕಾದ ಪೂರ್ವ ತರಬೇತಿಯ ಅಗತ್ಯತೆಯನ್ನು ಹಂಚಿಕೊಂಡರು.

ಯಾವುದೇ ವಿದ್ಯಾರ್ಥಿಗೆ ನೇರವಾಗಿ ಪ್ರಮುಖ ಪಾತ್ರಗಳನ್ನು (ಮುಖ್ಯಮಂತ್ರಿ, ವಿರೋಧ ಪಕ್ಷದ ನಾಯಕ, ಸ್ಪೀಕರ್ ಇತ್ಯಾದಿ) ನೀಡದೆ, ಚೀಟಿ ಎತ್ತುವ ಮೂಲಕ ಆಡಳಿತ ಪಕ್ಷ ಮತ್ತು ವಿರೋಧ ಪಕ್ಷಗಳನ್ನು ವಿಂಗಡಿಸುವುದು. ಆಡಳಿತ ಮತ್ತು ವಿರೋಧ ಪಕ್ಷದ ಸದಸ್ಯರೇ ಚರ್ಚಿಸಿ ತಮ್ಮ ನಾಯಕರನ್ನು ಪ್ರಜಾಸತ್ತಾತ್ಮಕವಾಗಿ ಆಯ್ಕೆ ಮಾಡಿಕೊಳ್ಳಲು ಅವಕಾಶ ನೀಡುವುದು ಎಂದರು.

ವಿದ್ಯಾರ್ಥಿಗಳ ಪ್ರಾತಿನಿಧ್ಯತೆಯಲ್ಲಿ ಶಾಲಾ ಹಂತದಲ್ಲಿ (8-10%), ಪ್ರೌಢಶಾಲೆ (10-15%), ಪದವಿ ವಿದ್ಯಾರ್ಥಿಗಳು (50-60%) ಹಾಗೂ ಕಾನೂನು ಮತ್ತು ಸ್ನಾತಕೋತ್ತರ ವಿದ್ಯಾರ್ಥಿಗಳಿಗೆ (25-30%) ಕಾರ್ಯಕ್ರಮದಲ್ಲಿ ಭಾಗವಹಿಸಲು ನಿಗದಿತ ಅನುಪಾತದಲ್ಲಿ ಅವಕಾಶ ನೀಡಲಾಗುವುದು. ವಿಧಾನ ಸೌಧದ ಕಲಾಪದ ಮಾದರಿಯಲ್ಲೇ ಸ್ಪೀಕರ್ ಪೀಠ, ಆಡಳಿತ-ವಿರೋಧ ಪಕ್ಷಗಳ ಆಸನ ವ್ಯವಸ್ಥೆ, ಮಾರ್ಷಲ್‌ಗಳು, ಸಚಿವಾಲಯದ ಸಿಬ್ಬಂದಿ, ಮಾಧ್ಯಮ ಗ್ಯಾಲರಿ ಹಾಗೂ ಸಾರ್ವಜನಿಕ ಪ್ರೇಕ್ಷಕರ ಗ್ಯಾಲರಿಯನ್ನು ಸಜ್ಜುಗೊಳಿಸಲಾಗುತ್ತದೆ ಎಂದು ಹೇಳಿದರು.

ತರಬೇತಿ ಮತ್ತು ವಿಷಯಗಳು ಕಾರ್ಯಕ್ರಮಕ್ಕೂ ಮುನ್ನ ವಿದ್ಯಾರ್ಥಿಗಳಿಗೆ ಸಂಸದೀಯ ನಡಾವಳಿ ಹಾಗೂ ಜೀ-ರೋ ಅವರ್ ಕುರಿತು ತರಬೇತಿ ನೀಡಲಾಗುವುದು. ರಿಹರ್ಸಲ್ ಮತ್ತು ಅಂತಿಮ ದಿನದ ಕಲಾಪಕ್ಕೆ ಬೇರೆ ಬೇರೆ ಪ್ರಚಲಿತ ವಿಷಯಗಳನ್ನು (ಉದಾ: ಪರಿಸರ ಸಂರಕ್ಷಣೆ, ಡಿಜಿಟಲ್ ಗೌಪ್ಯತೆ/ಸೈಬರ್ ಭದ್ರತೆ, ಅಭಿವೃದ್ಧಿ ಯೋಜನೆಗಳು, ಕೃತಕ ಬುದ್ಧಿಮತ್ತೆ ಇತ್ಯಾದಿ ) ಚರ್ಚೆಗೆ ನಿಗದಿಪಡಿಸಲು ಸಭೆಯಲ್ಲಿ ತೀರ್ಮಾನಿಸಲಾಯಿತು.

ಈ ಸಭೆಯಲ್ಲಿ ಅಪರ ಜಿಲ್ಲಾಧಿಕಾರಿ ಡಾ. ದುರಗೇಶ್ ಕೆ. ಆರ್, ಸಮಾಜ ಕಲ್ಯಾಣ ಇಲಾಖೆಯ ಉಪ ನಿರ್ದೇಶಕಿ ಶ್ರೀಮತಿ ಡಾ. ನಂದಾ ಹಣಬರಹಟ್ಟಿ, ಸಾರ್ವಜನಿಕ ಶಿಕ್ಷಣ ಇಲಾಖೆಯ ಉಪ ನಿರ್ದೇಶಕ ಆರ್. ಎಸ್. ಬುರಡಿ, ಪದವಿ ಪೂರ್ವ ಶಿಕ್ಷಣ ಇಲಾಖೆಯ ಉಪ ನಿರ್ದೇಶಕ ಮಾಸನಾಯಕ ಸೇರಿದಂತೆ ವಿವಿಧ ಇಲಾಖೆಯ ಅಧಿಕಾರಿಗಳು ಹಾಜರಿದ್ದರು.

# ಮಾನವ ದಿನಗಳ ಸೃಜನೆ ಮಾಡದಿದ್ದರೇ ಶಿಸ್ತು ಕ್ರಮ : ಜಿಪಂ ಸಿಇಓ ಮುಕುಲ್ ಜೈನ್

## ತಾಲೂಕಿನ ಹೊಸಳ್ಳಿ ಗ್ರಾಮಕ್ಕೆ ಭೇಟಿ, ವಿಬಿಜಿ-ರಾಮ್-ಜಿ ಕೂಲಿಕಾರರೊಂದಿಗೆ ಸಂವಾದ



ರೋಣ, 10- ತಾಲೂಕಿನಲ್ಲಿ ಮಾನವ ದಿನಗಳ ಸೃಜನೆ ತುಂಬಾ ಕಡಿಮೆ ಇದೆ, ಮಾನವ ದಿನಗಳ ಸೃಜನೆಗೆ ಒತ್ತು ಕೊಟ್ಟು ಜನರಿಗೆ ಕೆಲಸ ಕೊಡದಿದ್ದರೆ ಶಿಸ್ತು ಕ್ರಮ ಕೈಗೊಳ್ಳಬೇಕಾಗುತ್ತದೆ ಅಂತಾ ಜಿಲ್ಲಾ ಪಂಚಾಯತ ಮುಖ್ಯ ಕಾರ್ಯ ನಿರ್ವಾಹಕ ಅಧಿಕಾರಿಗಳಾದ ಮುಕುಲ್ ಜೈನ ಗ್ರಾಮ ಪಂಚಾಯತಿ ಅಭಿವೃದ್ಧಿ ಅಧಿಕಾರಿಗಳಿಗೆ ಹಾಗೂ ವಿಬಿಜಿ-ರಾಮ್-ಜಿ ಸಿಬ್ಬಂದಿಗಳಿಗೆ ಕಟ್ಟು ನಿಟ್ಟಿನ ಸೂಚನೆ ನೀಡಿದರು...

ತಾಲೂಕ ಪಂಚಾಯತ ಸಭಾ ಭವನದಲ್ಲಿ ಪ್ರಗತಿ ಪರಿಶೀಲನೆ ಸಭೆಯಲ್ಲಿ ಮಾತನಾಡಿದ ಅವರು ವಿಬಿಜಿ-ರಾಮ್-ಜಿ ಯೋಜನೆಯಡಿಯಲ್ಲಿ 125 ದಿನಗಳು ಜನರಿಗೆ ಕೆಲಸ ಕೊಡಲು ಸಾಕಷ್ಟು ಅವಕಾಶಗಳು ಇವೆ, ಏಕೆ ನೀವು ಆ ಅವಕಾಶಗಳನ್ನು ಜನರಿಗೆ ತಲುಪಿಸುತ್ತಿಲ್ಲಾ, ಯಾವುದೇ ನೆಪಗಳನ್ನು ಹೇಳದೇ ಜನರಿಗೆ ಕೆಲಸ ಒದಗಿಸುವುದು ನಮ್ಮ ನಿಮ್ಮೆಲ್ಲರ ಕರ್ತವ್ಯ ಈ ಹಿನ್ನೆಲೆ ಪ್ರತಿಯೊಂದು ಗ್ರಾಮ ಪಂಚಾಯತಿ ಮಟ್ಟದಲ್ಲಿ ಈ ಯೋಜನೆಯಡಿಯಲ್ಲಿ ಕೆಲಸ ಕೊಡಬೇಕು ಇಲ್ಲದೆ ಹೋದರೆ ಶಿಸ್ತು ಕ್ರಮ ಕೈಗೊಳ್ಳಲಾಗುವದು ಎಂದರು..

ಇನ್ನು ಕೆಲಸ ಕೊಡದೇ ಇರಲು ಕಾರಣಗಳನ್ನು ಎನು? ಯಾಕೆ? ಎಂದು ಕೆಲವು ಪಿಡಿಓ ಗಳನ್ನು ನಿಲ್ಲಿಸಿ ವಿಷಯ ಕೇಳಿದ ಅವರು, ಸಾಮೂಹಿಕ ಕಾಮಗಾರಿಗಳು ತಮ್ಮ ಗ್ರಾಮ ಪಂಚಾಯತಿ ಕ್ರಿಯಾ ಯೋಜನೆಯಲ್ಲಿ ಇಲ್ಲದೇ ಹೋದರೆ ಕಾಮಗಾರಿ ಗಳನ್ನು ಗುರುತಿಸಿ ಹೆಚ್ಚುವರಿ ಕ್ರಿಯಾ ಯೋಜನೆಯನ್ನು ತಯಾರಿಸಿ ಕೊಡಿ, ಅದಕ್ಕೆ ಅನುಮೋದನೆ ದೊರೆತ ಕೂಡಲೇ ಕೆಲಸವನ್ನು ಪ್ರಾರಂಭಿಸಲು ಸೂಚನೆ ನೀಡಿದರು..

ಪಂಚಾಯತ ರಾಜ್ ಇಲಾಖೆ ಇಂಜನಿಯರ ಪುರೋಹಿತ ಅವರಿಗೆ ಗ್ರಾಮ ಪಂಚಾಯತಿ ನೂತನ ಕಟ್ಟಡ ವಿಚಾರವಾಗಿ ಎಸ್ಟಿಮೇಟ್ ತಯಾರಿಸದ ಹಿನ್ನೆಲೆ ಇಲ್ಲ ಸಲ್ಲದ ಕಾರಣ ಹೇಳದೇ ನೀತಿ ಸಂಹಿತೆ ಬಳಿಕ ಟೆಂಡರ್ ಕರೆದು ಕೆಲಸ ಪ್ರಾರಂಭಿಸಲು ಗರಂ ಆದರು, ಇನ್ನು ಮಲ್ಲಾಪೂರ ಗ್ರಾಮದಲ್ಲಿ ಕೆಲಸ ಕೊಡದೇ ಇರುವ ಪಿಡಿಓ ಲಕ್ಷ್ಮೀ ಗೋಡಿ ಅವರಿಗೆ ಕಾರಣ ಕೇಳಿದ ಅವರು ನೀವು ಬಂದಾಗಿನಿಂದ 0% ಮಾನವ ದಿನಗಳು ಸೃಜನೆ ಆಗಿವೆ ಅಂತಾ ಗರಂ ಆದರು ಗ್ರಾಮ ಪಂಚಾಯತಿ ಮಟ್ಟದಲ್ಲಿ ಗ್ರಾಮ ಸಭೆಗಳನ್ನು ( ನಿತಿಸಂಹಿತೆ ) ಮುಗಿದ ಬಳಿಕ ನಿಯಮಾನುಸಾರ ಮಾಡಿ ಪಂಚತಂತ್ರದಲ್ಲಿ ಅಳವಡಿಸಲು ಸೂಚಿಸಿದರು...

ಇನ್ನು ಸ್ವಚ್ಛ ಭಾರತ ಮಷಿನ್ ಅಡಿ ಎಲ್ಲಾ ಗ್ರಾಮ ಪಂಚಾಯತಿ ಯಲ್ಲಿ ಖಘಓ ಘಟಕ ಇರಲೇ ಬೇಕು ಯಾವ ಗ್ರಾಮ ಪಂಚಾಯತಿ ಯಲ್ಲಿ ಇಲ್ಲಾ ಅದನ್ನು ಹೆಚ್ಚುವರಿ ಕ್ರೀಯಾ ಯೋಜನೆಯಡಿಯಲ್ಲಿ ಅಳವಡಿಸಿ ಕೊಡಲು ತಿಳಿಸಿದರು. ಖಘಓ ವಾಹನಕ್ಕೆ ಪ್ರತಿ ಗ್ರಾಮದಲ್ಲಿ ಮಹಿಳಾ ಚಾಲಕರು ಇರಬೇಕು ಇಲ್ಲದಿದ್ದರೆ ಕೂಡಲೇ ತೆಗದುಕೊಳ್ಳಲು ಸೂಚಿಸಿದರು. ಇನ್ನುಳಿದ ವಿಷಯಗಳ ಕುರಿತು ಪರಿಶೀಲನೆ ನಡೆಸಿದ ಅವರು ಸಂಜೀವಿನಿ ಯೋಜನೆ, ಹೌಸಿಂಗ್, ಃಖಖ, ವಸತಿ ಯೋಜನೆ, ಸಕಾಲ ಸೇರಿದಂತೆ ಹಲವು ವಿಷಯಗಳ ಕುರಿತು ಪ್ರಗತಿ ಪರಿಶೀಲನೆ ನಡೆಸಿ ಒಂದು ವಾರದ ಒಳಗೆ ಪ್ರಗತಿ ಸಾಧಿಸಲು ಸೂಚನೆ ನೀಡಿದರು..

ಕಾರ್ಯಕ್ರಮ ವನ್ನು ಸಹಾಯಕ ನಿರ್ದೇಶಕರಾದ (ಪಂಚಾಯತ ರಾಜ್) ಶಿವನಗೌಡ ಮೆಣಸಗಿ ಸ್ವಾಗತಿಸಿ ವಂದಿಸಿದರು, ಈ ಸಂದರ್ಭದಲ್ಲಿ ಮಾನ್ಯ ಉಪ ಕಾರ್ಯದರ್ಶಿಗಳಾದ ಸಿ, ಆರ್ ಮುಂಡರಗಿ,ಜಿಲ್ಲಾ ಯೋಜನಾ ನಿರ್ದೇಶಕರಾದ ಎಂ,ವ್ಹಿ, ಚಳಗೇರಿ, ಕಾರ್ಯ ನಿರ್ವಾಹಕ ಅಧಿಕಾರಿಗಳಾದ ಚಂದ್ರಶೇಖರ ಬಿ ಕಂದಕೂರ, ತಾಲೂಕ ಪಂಚಾಯತ ಸಹಾಯಕ ಲೆಕ್ಕಾಧಿಕಾರಿಗಳಾದ ದೇವರಾಜ್ ಸಜ್ಜನಶೆಟ್ಟರ, ತಾಲೂಕ ಯೋಜನಾಧಿಕಾರಿಗಳಾದ ಸಿ.ಎಸ್ ನಿಲಗುಂದ ತಾಲೂಕಿನ ಎಲ್ಲಾ ಗ್ರಾಮ ಪಂಚಾಯತಿ ಅಭಿವೃದ್ಧಿ ಅಧಿಕಾರಿಗಳು, ಜಿಲ್ಲಾ ಕಾರ್ಯಕ್ರಮ ಸಮನ್ವಯ ಅಧಿಕಾರಿಗಳು, ಜಿಲ್ಲಾ ಮಾಹಿತಿ ಶಿಕ್ಷಣ ಸಂವಹನ ಅಧಿಕಾರಿಗಳು ಸೇರಿದಂತೆ, ತಾಲೂಕ ವಿಬಿಜಿ-ರಾಮ್-ಜಿ ಸಿಬ್ಬಂದಿಗಳು, ಗ್ರಾಮ ಪಂಚಾಯತಿ ಸಿಬ್ಬಂದಿಗಳು ಸೇರಿದಂತೆ ಗ್ರಾಮಸ್ಥರು ಕೂಲಿ ಕಾರ್ಮಿಕರು ಹಾಜರಿದ್ದರು...

ಬಾಕ್ಸ

ರೋಣ ತಾಲೂಕಿನ ಹೊಸಳ್ಳಿ ಗ್ರಾಮ ಪಂಚಾಯತಿಯ ಕೆರೆ ಪುನಶ್ಚೇತನ ಕಾಮಗಾರಿ ವಿಕ್ಷಣೆ ಮಾಡಿದರು ಈ ಸಂದರ್ಭದಲ್ಲಿ ವಿಬಿಜಿ-ರಾಮ್-ಜಿ ಕೂಲಿ ಕಾರ್ಮಿಕರು ಹೂಗುಚ್ಚ ನೀಡುವ ಮೂಲಕ ಸಿಇಓ ಅವರನ್ನು ಸ್ವಾಗತಿಸಿದರು, ಬಳಿಕ ಕೂಲಿ ಕಾರ್ಮಿಕರೊಂದಿಗೆ ಮಾನ್ಯ ಮುಖ್ಯ ಕಾರ್ಯ ನಿರ್ವಾಹಕ ಅಧಿಕಾರಿಗಳು ಕುಂದು ಕೊರತೆಗಳನ್ನು ಆಲಿಸಿದರು, ಜೊತೆಗೆ ನಿರಂತರ ಕೆಲಸದ ಬೇಡಿಕೆ ಈಡೇರಿಕೆಗೆ ಗ್ರಾಮಸ್ಥರು ಆಗ್ರಹಿಸಿದರು. ನಿರಂತರವಾಗಿ ಕೆಲಸ ಬೇಕಾದರೆ ಗ್ರಾಮ ಪಂಚಾಯತಿ ಗೆ ನಮೋನೆ 6 ನ್ನು ಸಲ್ಲಿಸಲು ತಿಳಿಸಿದರು.

# ಹೆಣ್ಣು ಭ್ರೂಣ ಹತ್ಯೆ ತಡೆಗೆ 'ಬೇಟಿ ಬಚಾವೋ, ಬೇಟಿ ಪಢಾವೋ' ಅಭಿಯಾನಕ್ಕೆ ಒತ್ತು



ಕೂಡ್ಲಿಗಿ, 10– ಹೆಣ್ಣುಮಕ್ಕಳ ರಕ್ಷಣೆ, ಶಿಕ್ಷಣ ಮತ್ತು ಸಬಲೀಕರಣಕ್ಕೆ ಪ್ರತಿಯೊಬ್ಬರೂ ಕೈಜೋಡಿಸಬೇಕು

ಹೆಣ್ಣುಮಕ್ಕಳ ರಕ್ಷಣೆ, ಶಿಕ್ಷಣ ಹಾಗೂ ಸಬಲೀಕರಣದ ಉದ್ದೇಶದಿಂದ ಕೇಂದ್ರ ಸರ್ಕಾರ ಜಾರಿಗೆ ತಂದಿರುವ 'ಬೇಟಿ ಬಚಾವೋ, ಬೇಟಿ ಪಢಾವೋ' ಯೋಜನೆಯು ಸಮಾಜದಲ್ಲಿ ಹೆಣ್ಣುಮಕ್ಕಳ ಬಗ್ಗೆ ಜಾಗೃತಿ ಮೂಡಿಸುವ ಮಹತ್ವದ ಅಭಿಯಾನವಾಗಿದೆ ಎಂದು ಮಾಜಿ ಅಧ್ಯಕ್ಷ ಶಾರದಾ ಬಾಯಿ ತಿಳಿಸಿದರು.

ಅವರು ಕೂಡ್ಲಿಗಿಯ ಅಂಗನವಾಡಿ 'ಕೆ' ಕೇಂದ್ರದಲ್ಲಿ ಗಿಡಕ್ಕೆ ನೀರು ಹಾಕುವ ಮೂಲಕ ಪ.ಪಂ ಮಾಜಿ ಅಧ್ಯಕ್ಷ ಶಾರದಾ ಬಾಯಿ ಉದ್ಘಾಟಿಸಿದರು.

ನಂತರ ಈ ಕಾರ್ಯಕ್ರಮವನ್ನು ಉದ್ದೇಶಿಸಿ ಅಂಗನವಾಡಿ ಕೆ ಕೇಂದ್ರದ ಶಿಕ್ಷಕಿಯಾದ ಎಂ ಜಯಶ್ರೀ ಭೇಟಿ ಬಚಾವೋ ಬೇಟಿ ಪಡಾವೋ ಎಂದರೆ ಹೆಣ್ಣು ಮಕ್ಕಳನ್ನು ರಕ್ಷಿಸಿ , ಹೆಣ್ಣು ಮಕ್ಕಳಿಗೆ ಶಿಕ್ಷಣ ನೀಡಿ . ಇದು ಒಂದು ಕೇಂದ್ರ ಸರ್ಕಾರದ ಯೋಜನೆ ಎಂದರು .ಹೆಣ್ಣು ಭ್ರೂಣ ಹತ್ಯೆ ತಡೆಗಟ್ಟುವುದು, ಲಿಂಗಾನುಪಾತ ಸುಧಾರಿಸುವುದು, ಹೆಣ್ಣುಮಕ್ಕಳ ಶಿಕ್ಷಣ–ಕ್ಕೆ ಪ್ರೋತ್ಸಾಹ ನೀಡುವುದು ಹಾಗೂ ಬಾಲಕಿಯರಿಗೆ ಸಮಾನ ಅವಕಾಶ ಕಲ್ಪಿಸುವುದು ಈ ಯೋಜನೆಯ ಪ್ರಮುಖ ಉದ್ದೇಶಗಳಾಗಿವೆ.

ಇಂದಿನ ಸಮಾಜದಲ್ಲಿ ಹೆಣ್ಣುಮಕ್ಕಳು ಶಿಕ್ಷಣ, ಕ್ರೀಡೆ, ವಿಜ್ಞಾನ, ಆಡಳಿತ ಸೇರಿದಂತೆ ವಿವಿಧ ಕ್ಷೇತ್ರಗಳಲ್ಲಿ ಸಾಧನೆ ಮಾಡುತ್ತಿದ್ದಾರೆ. ಆದರೂ ಕೆಲವೆಡೆ ಬಾಲ್ಯವಿವಾಹ, ಲಿಂಗ ತಾರತಮ್ಯ ಮತ್ತು ಶಿಕ್ಷಣದಿಂದ ವಂಚಿತರಾಗುವ ಸಮಸ್ಯೆಗಳು ಕಂಡುಬರುತ್ತಿವೆ. ಇಂತಹ ಸಮಸ್ಯೆಗಳನ್ನು ನಿವಾರಿಸಲು ಪೋಷಕರು, ಶಿಕ್ಷಕರು, ಸಾರ್ವಜನಿಕರು ಹಾಗೂ ವಿವಿಧ ಇಲಾಖೆಗಳು ಒಟ್ಟಾಗಿ ಕಾರ್ಯನಿರ್ವಹಿಸಬೇಕಾಗಿದೆ.

ಹೆಣ್ಣುಮಕ್ಕಳಿಗೆ ಉತ್ತಮ ಶಿಕ್ಷಣ ನೀಡುವುದರ ಜೊತೆಗೆ ಅವರ ಹಕ್ಕುಗಳು, ಆರೋಗ್ಯ ಮತ್ತು ಸುರಕ್ಷತೆಯ ಬಗ್ಗೆ ಅರಿವು ಮೂಡಿಸುವುದು ಅಗತ್ಯವಾಗಿದೆ. ಹೆಣ್ಣುಮಕ್ಕಳನ್ನು ಹೊರೆ ಎಂದು ಭಾವಿಸದೆ, ಸಮಾಜದ ಅಮೂಲ್ಯ ಸಂಪತ್ತು ಎಂದು ಪರಿಗಣಿಸಬೇಕು.

'ಹೆಣ್ಣುಮಗು ಉಳಿಸಿ, ಹೆಣ್ಣುಮಗು ಓದಿಸಿ' ಎಂಬ ಸಂದೇಶವನ್ನು ಪ್ರತಿಯೊಬ್ಬರೂ ಜೀವನದಲ್ಲಿ ಅಳವಡಿಸಿಕೊಂಡಾಗ ಮಾತ್ರ ಸಮಾನತೆಯ ಸಮಾಜ ನಿರ್ಮಾಣ ಸಾಧ್ಯ.

ಸಹಾಯಕಿಯಾದ ರೇಣುಕಮ್ಮ ಹಾಗೂ ಕಿಶೋರ್ ಮಕ್ಕಳ ತಾಯಂದಿರು ಇನ್ನು ಮುಂತಾದವರು ಉಪಸ್ಥಿತರಿದ್ದರು.

# ಕಾಂತೆಬೆನ್ನೂರಿನಲ್ಲಿ ಸಡಗರದಲ್ಲಿ ನಡೆದ ಮಾಬು ಸುಬಾನಿ ಉರುಸು



ವರದಿ :ಡಿ.ಪರಶುರಾಮಪ್ಪ

ಹೂವಿನಹಡಗಲಿ : ಹಜರತ್ ಮೆಹಬೂಬ್ ಸುಭಾನಿ ದರ್ಗಾದಲ್ಲಿ ಇತ್ತೀಚಿಗೆ ಅಕ್ಟೋಬರ್ 6 ರಿಂದ 8 ನೇ ತಾರೀಖಿನವರೆಗೆ ಅತ್ಯಂತ ಸಡಗರ ಸಂಭ್ರಮದಿಂದ ಈ ಉರುಸು ಹಬ್ಬವನ್ನು ಆಚರಿಸಿದರು.

ಹಜರತ್ ಮೆಹಬೂಬ್ ಸುಬಾನೀ ಉರುಸು ಕಾರ್ಯಕ್ರಮದಲ್ಲಿ ಸೌಹಾರ್ದತೆಯ ಸಂದೇಶ : ಅತ್ಯಂತ ಸಡಗರ ಸೌಹಾರ್ದ ವಾತಾವರಣದಲ್ಲಿ ವಿಜೃಂಭಣೆಯಿಂದ ಜರುಗಿದ ಈ ಉರುಸು ಕೇವಲ ಒಂದು ಧರ್ಮಕ್ಕೆ ಸೀಮಿತವಾಗಿರದೆ ಹಿಂದೂ ಮುಸ್ಲಿಂ ಎರಡು ಧರ್ಮಗಳ ಭಕ್ತರು ಒಟ್ಟಾಗಿ ಪಾಲ್ಗೊಳ್ಳುವ ಮೂಲಕ ಕೋಮು ಸೌಹಾರ್ದತೆಗೆ ಅತ್ಯುತ್ತಮ ಉದಾಹರಣೆಯಾಗಿದೆ.

ಗಂಧ ಹಾಗೂ ಗಲೀಪ್ ಮೆರವಣಿಗೆ : ಧರ್ಮಗಳಲ್ಲಿ ವಿಶೇಷವಾಗಿ ಗಂಧದ ಆಚರಣೆ ನಡೆದು, ಭಕ್ತಿ ಭಾವದಿಂದ ಅದ್ದೂರಿಯ ಮೆರವಣಿಗೆ ಮೂಲಕ ಗಲೀಪ್ ಸಮರ್ಪಿಸಿದರು. ಧಾರ್ಮಿಕ ವಿಧಿ ವಿಧಾನಗಳು : ದರ್ಗಾದ ಧರ್ಮ ಗುರು ಸಾನಿಧ್ಯದಲ್ಲಿ ಉರುಸು ಪಾತೆಹಾ, ಧರ್ಮಸಭೆ ಹಾಗೂ ವಿಶೇಷ ಪೂಜೆ ನೆರವೇರಿತು. ಕಾಂತೆಬೆನ್ನೂರು ಗ್ರಾಮದಲ್ಲಿ ಪ್ರತಿವರ್ಷದ ಪದ್ಧತಿಯಂತೆ ಈ ವರ್ಷವೂ ಕೂಡ ಸಂಭ್ರಮ ಸಡಗರದಲ್ಲಿ ಉರುಸು ಹಬ್ಬದಲಿ ಗಂಧ ಹಾಗೂ ಗಲೀಪ್ ಸೇವೆ, ಹೂವಿನ ಗಲೀಪ್, ಬಟ್ಟೆ ಗಲೀಪ್, ತುಂಬಿದ ಉರುಸು ಕಾರ್ಯಕ್ರಮದಲ್ಲಿ ಜನಾಬ್ ದಾವಲ್ ಸಾಬ್ ಸುಂಕದ, ಭಾಷಾ ಸಾಬ್ ಮುಜಾವರ್, ಬೀರಬ್ಬಿ ಹುಸೇನ್ ಸಾಬ್, ಮಮ್ತಾಜ್ ಬಿ ಮುಜಾವರ್, ಹುಸೇನ್ ಸಾಬ್ ಅಂಗಡಿ, ಭಾಷಾ ಸಾಬ್ ಅಂಗಡಿ, ಪಿ ಫಕೀರ ಸಾಬ್ ದೊಡ್ಮನಿ, ಆಯನ್ ಶಾಮಿಯನ್ ಸಪ್ಲೈಯರ್ ಇತರರು ಆಚರಣೆಯಲ್ಲಿ ಪಾಲ್ಗೊಂಡು ದೇವರ ಕೃಪೆಗೆ ಪಾತ್ರರಾದರು.

# ಹಗರಿಯ ಕೃಷಿ ವಿಜ್ಞಾನ ಕೇಂದ್ರದಲ್ಲಿ ಮೆಣಸಿನಕಾಯಿ ಬೆಳೆಯ ಉತ್ಪಾದನಾ ತಾಂತ್ರಿಕತೆ ಕುರಿತು ಕಾರ್ಯಾಗಾರ

## ರಫ್ತಿಗೆ ಹೆಚ್ಚಿನ ಒತ್ತು ಹಾಗೂ ಸಾವಯವ ಕೃಷಿಗೆ ಕರೆ: ಡಾ. ಕೃಷ್ಣಕುಮಾರ್ ಎನ್.ಕೆ




ಬಳ್ಳಾರಿ, 10– ಮೆಣಸಿನಕಾಯಿ ಬೆಳೆಯುವ ರೈತರು ಗುಣಮಟ್ಟದ ಇಳುವರಿ ಪಡೆದು ವಿದೇಶಗಳಿಗೆ ರಫ್ತು ಮಾಡುವುದರಿಂದ ಹೆಚ್ಚಿನ ಲಾಭ ಗಳಿಸಲು ಸಾಧ್ಯ. ರೈತರು ಸಾವಯವ ಪದ್ಧತಿಯಲ್ಲಿ ಮೆಣಸಿನಕಾಯಿ ಬೆಳೆಯಲು ಆದ್ಯತೆ ನೀಡಬೇಕು ಎಂದು ನವದೆಹಲಿಯ ಐ.ಸಿ.ಎ.ಆರ್.ನ ಮಾಜಿ ನಿರ್ದೇಶಕ ಡಾ. ಕೃಷ್ಣಕುಮಾರ್ ಎನ್.ಕೆ. ಅವರು ಹೇಳಿದರು.

ಇಲ್ಲಿನ ಕೃಷಿ ವಿಜ್ಞಾನಗಳ ವಿಶ್ವವಿದ್ಯಾಲಯ, ರಾಯಚೂರು ವ್ಯಾಪ್ತಿಯ ಐ.ಸಿ.ಎ.ಆರ್–ಕೃಷಿ ವಿಜ್ಞಾನ ಕೇಂದ್ರ (ಕೆ.ವಿ.ಕೆ.), ಹಗರಿ, ತೋಟಗಾರಿ–ಕೆ ಇಲಾಖೆ ಹಾಗೂ ಧನುಕಾ ಅಗ್ರಿಟೆಕ್ ಲಿಮಿಟೆಡ್ ಇವರ ಸಂಯುಕ್ತಾಶ್ರಯದಲ್ಲಿ "ಮೆಣಸಿನಕಾಯಿ ಬೆಳೆಯ ಉತ್ಪಾದನಾ ತಾಂತ್ರಿಕತೆಗಳು" ಕುರಿತಾದ ಒಂದು ದಿನದ ತರಬೇತಿ ಹಾಗೂ ಕಾರ್ಯಾಗಾರವನ್ನು ಶುಕ್ರವಾರ ಉದ್ಘಾಟಿಸಿ ಅವರು ಮಾತನಾಡಿದರು.

ಹಾವೇರಿ ಜಿಲ್ಲೆಯಲ್ಲಿರುವ ಮೆಣಸಿನಕಾಯಿ ಬೀಜೋತ್ಪಾದನಾ ಘಟಕದಿಂದ ರೈತರು ಗುಣಮಟ್ಟದ ಬೀಜಗಳನ್ನು ಪಡೆದುಕೊಳ್ಳುವಂತೆ ಸಲಹೆ ನೀಡಿದರು.

ತೋಟಗಾರಿಕೆ ಜಂಟಿ ನಿರ್ದೇಶಕ ಶಶಿಕಾಂತ್ ಕೋಟಿಮನಿ ಅವರು ಮಾತನಾಡಿ, ಬಳ್ಳಾರಿ ಜಿಲ್ಲೆಯಲ್ಲಿ ಸುಮಾರು 34,000 ಎಕರೆ ಪ್ರದೇಶದಲ್ಲಿ ಮೆಣಸಿನಕಾಯಿ ಬೆಳೆಯಲಾಗುತ್ತಿದ್ದು, ಇಡೀ ಕರ್ನಾಟಕ ರಾಜ್ಯದ ಒಟ್ಟು ಉತ್ಪಾದನೆಯ ಶೇ.60ರಷ್ಟು ಪಾಲು ಬಳ್ಳಾರಿ ಜಿಲ್ಲೆಯಿಂದಲೇ ಬರುತ್ತಿದೆ. ರೈತರು ವೈಜ್ಞಾನಿಕ ಪದ್ಧತಿಗಳ ಜೊತೆಗೆ ಜೈವಿಕ ಕೀಟನಾಶಕಗಳನ್ನು ಬಳಸಿ ಬೆಳೆಯಬೇಕು ಹಾಗೂ ಮೆಣಸಿನಕಾಯಿಯ ಮೌಲ್ಯವರ್ಧನೆ ಮಾಡುವುದರಿಂದ ಆರ್ಥಿಕವಾಗಿ ಹೆಚ್ಚಿನ ಲಾಭ ಕಾಣಬಹುದು ಎಂದು ಅಭಿಪ್ರಾಯಪಟ್ಟರು.

ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿದ್ದ ರಾಯಚೂರು ಕೃಷಿ ವಿಜ್ಞಾನಗಳ ವಿಶ್ವವಿದ್ಯಾಲಯದ ವಿಸ್ತರಣಾ ನಿರ್ದೇಶಕ ಡಾ. ಎ.ಆರ್. ಕುರುಬರ ಅವರು ಮಾತನಾಡಿ, ಉತ್ತರ ಕರ್ನಾಟಕದಲ್ಲಿ ಮೆಣಸಿನಕಾಯಿ ಪ್ರಮುಖ ಬೆಳೆಯಾಗಿದ್ದು, ಅದರಲ್ಲೂ ಬಳ್ಳಾರಿ ಮತ್ತು ರಾಯಚೂರು ಜಿಲ್ಲೆಗಳಲ್ಲಿ ವ್ಯಾಪಕವಾಗಿ ಬೆಳೆಯಲಾಗುತ್ತಿದೆ. ಇಲ್ಲಿನ ಬೆಳೆಗೆ ಉತ್ತಮ ರಫ್ತು ಅವಕಾಶಗಳಿವೆ. ಆದರೆ ಅತಿಯಾದ ಕೀಟನಾಶಕಗಳ ಬಳಕೆಯು ಕ್ಯಾನ್ಸರ್‌ನಂತಹ ಮಾರಕ ರೋಗಗಳಿಗೆ ಕಾರಣವಾಗಬಹುದು. ಹಾಗಾಗಿ ಕೀಟನಾಶಕಗಳ ಬಳಕೆಯನ್ನು ಕಡಿಮೆ ಮಾಡಿ, ಗುಣಮಟ್ಟದ ಮೆಣಸಿನಕಾಯಿ ಬೆಳೆಯಲು ರೈತರು ಮುಂದಾಗಬೇಕು ಎಂದು ಕರೆ ನೀಡಿ–ದರು.

*ತಜ್ಞರಿಂದ ಮಾಹಿತಿ ಹಾಗೂ ರೈತ–ವಿಜ್ಞಾನಿ ಸಂವಾದ:* ಕಾರ್ಯಾಗಾರದಲ್ಲಿ ನುರಿತ ಕೃಷಿ ವಿಷಯ ತಜ್ಞರಿಂದ ಮೆಣಸಿನಕಾಯಿ ಬೆಳೆಯ ಸುಧಾರಿತ ಬೇಸಾಯ ಕ್ರಮಗಳ ಕುರಿತು ರೈತರಿಗೆ ಸಮಗ್ರ ವೈಜ್ಞಾನಿಕ ಮಾಹಿತಿ ನೀಡಲಾಯಿತು. ಇದೇ ವೇಳೆ ರೈತರ ಸಂಶಯಗಳನ್ನು ನಿವಾರಿಸಲು ಸುಮಾರು ಎರಡು ಗಂಟೆಗಳ ಕಾಲ 'ರೈತ ಮತ್ತು ವಿಜ್ಞಾನಿಗಳ ಸಂವಾದ' ಕಾರ್ಯಕ್ರಮವೂ ಯಶಸ್ವಿಯಾಗಿ ನಡೆಯಿತು.

ಕಾರ್ಯಕ್ರಮದ ಆರಂಭದಲ್ಲಿ ಹಿರಿಯ ವಿಜ್ಞಾನಿ ಹಾಗೂ ಕೇಂದ್ರದ ಮುಖ್ಯಸ್ಥ ಡಾ. ರವಿ ಎಸ್. ಅವರು ಪ್ರಾಸ್ತಾವಿಕ ನುಡಿಗಳನ್ನಾಡಿ ಅತಿಥಿಗಳನ್ನು ಸ್ವಾಗತಿಸಿದರು. ಕೃಷಿ ವಿಸ್ತರಣೆಯ ವಿಜ್ಞಾನಿ ಡಾ. ನವೀನ್ ಕುಮಾರ್ ಪಿ. ಕಾರ್ಯಕ್ರಮ ನಿರೂಪಿಸಿದರು. ಬಳ್ಳಾರಿ ತಾಲೂಕಿನ ವಿವಿಧ ಹಳ್ಳಿಗಳಿಂದ ಆಗಮಿಸಿದ್ದ ಸುಮಾರು 550ಕ್ಕೂ ಹೆಚ್ಚು ರೈತರು ಕಾರ್ಯಾಗಾರದಲ್ಲಿ ಪಾಲ್ಗೊಂಡಿದ್ದರು.

ಈ ಸಂದರ್ಭದಲ್ಲಿ ಬೆಂಗಳೂರಿನ ಐಸಿಎಆರ್–ಅಟಾರಿ ನಿರ್ದೇಶಕ ಡಾ. ಪ್ರಭಾಕರ್ ಎಂ., ಪ್ರಧಾನ ವಿಜ್ಞಾನಿ ಡಾ. ತಿಮ್ಮಪ್ಪ ಕೆ., ಐಸಿಎಆರ್–ಐಐಎಡಬ್ಲ್ಯೂಸಿ ಕೇಂದ್ರದ ಮುಖ್ಯಸ್ಥ ಡಾ. ಕೃಷ್ಣರಾವ್ ಬಿ., ಜಂಟಿ ಕೃಷಿ ನಿರ್ದೇಶಕ ಸೋಮಸುಂದರ್ ಕೆ.ಎಂ., ಪಶು ವಿಜ್ಞಾನ ಪ್ರಾಧ್ಯಾಪಕ ಡಾ. ರಮೇಶ್ ಬಿ.ಕೆ., ಕೃಷಿ ಸಂಶೋಧನಾ ಕೇಂದ್ರದ ಮುಖ್ಯಸ್ಥ ಡಾ. ಗಿರೀಶ್ ಜಿ., ಗಂಗಾವತಿಯ ಹಿರಿಯ ವಿಜ್ಞಾನಿ ಡಾ. ರಾಘವೇಂದ್ರ ಎಲಿಗಾರ್ ಹಾಗೂ ಧನುಕಾ ಅಗ್ರಿಟೆಕ್ ಲಿಮಿಟೆಡ್‌ನ ಅಧಿಕಾರಿಗಳಾದ ಡಾ. ಎಂ. ಪರಶುರಾಮಯ್ಯ, ಪವನಕುಮಾರ್ ಉಜಲಾ, ಮರಿಬಸಪ್ಪ ಮುಂತಾದವರು ಉಪಸ್ಥಿತರಿದ್ದರು.

ಧನುಕಾ ಕಂಪನಿಯ ವ್ಯವಹಾರ ವ್ಯವಸ್ಥಾಪಕ ಉಮಾಕಾಂತ್ ಎಸ್. ತಂಬೂಲೆ ವಂದಿಸಿದರು.

# ಇಂದು ಗವಿಶ್ರೀಗಳಿಂದ ಮೈಸೂರು ದಸರಾ ಉದ್ಘಾಟನೆ



ಕೊಪ್ಪಳ, 09– ಐತಿಹಾಸಿಕ, ಜಗತ್ಪಸಿದ್ಧ ಮೈಸೂರು ದಸರೆಯನ್ನು ಈ ಬಾರಿ ಕೊಪ್ಪಳದ ಸಂಸ್ಥಾನ ಗವಿಮಠದ ಶ್ರೀ ಗವಿಸಿದ್ಧೇಶ್ವರ ಮಹಾಸ್ವಾಮಿಗಳು ಅಕ್ಟೋಬರ್ 11 ರಂದು ನಾಡದೇವಿ ಶ್ರೀ ಚಾಮುಂಡೇಶ್ವರಿ ತಾಯಿಗೆ ಪೂಜೆ ಸಲ್ಲಿಸುವ ಮೂಲಕ ಉದ್ಘಾಟಿಸಲಿದ್ದಾರೆ.

ಕೊಪ್ಪಳದ ಶ್ರೀ ಗವಿಸಿದ್ಧೇಶ್ವರ ಮಹಾಸ್ವಾಮೀಜಿಗಳ ಪರಿಚಯ ಕೊಪ್ಪಳ ಗವಿಮಠದ ಪೀಠಾಧಿಪತಿಯಾಗಿ ಲಕ್ಷಾಂತರ ಭಕ್ತರ ಹೃದಯದಲ್ಲಿ ಸ್ಥಾನ ಪಡೆದಿರುವ ಶ್ರೀ ಅಭಿನವ ಗವಿಸಿದ್ಧೇಶ್ವರ ಮಹಾಸ್ವಾಮೀಜಿಗಳು ಕಲಬುರಗಿ ಜಿಲ್ಲೆಯ ಹಾಗರಗುಂಡಗಿ ಗ್ರಾಮದ ಸಾಮಾನ್ಯ ಜಂಗಮ ಕುಟುಂಬವೊಂದರಲ್ಲಿ 1977 ರಲ್ಲಿ ಜನಿಸಿದರು.

ಇವರ ಪೂರ್ವಾಶ್ರಮದ ಹೆಸರು ಪರ್ವತಯ್ಯ ಹಿರೇಮಠ , ಕುಟುಂಬದ ಆರ್ಥಿಕ ಸಂಕಷ್ಟದ ಪರಿಣಾಮ ಪರ್ವತಯ್ಯನವರ ಶಿಕ್ಷಣ ಪದೇಪದೇ ಅಡಚಣೆಗೆ ಒಳಗಾಗುತ್ತಿತ್ತು.

1989–90 ರ ಸಮಯದಲ್ಲಿ ಹಾಗರಗುಂಡಗಿ ಗ್ರಾಮಕ್ಕೆ ಬಂದಿದ್ದ ವಿಜಯಪುರದ ತಮದಡ್ಡಿ ಮಠದ ಶ್ರೀ ಶಿವಶಂಕರ ಸ್ವಾಮೀಜಿಗಳು : "ಈತನನ್ನು ಶಾಲೆಯಿಂದ ಯಾಕೆ ಬಿಡಿಸುತ್ತೀರಿ? ನಾನು ಎಲ್ಲಿಯಾದರೂ ಮಠಕ್ಕೆ ಸೇರಿಸಿ ಶಾಲೆ ಓದಿಸುತ್ತೇನೆ" ಎಂದು ಪರ್ವತಯ್ಯನ ತಂದೆ–ತಾಯಿಗೆ ಭರವಸೆ ನೀಡಿ ತಮ್ಮೊಂದಿಗೆ ಕರೆದುಕೊಂಡು ಗದಗ ಜಿಲ್ಲೆಯ ಮುಂಡರಗಿಯ ಶ್ರೀ ಅನ್ನದಾನೇಶ್ವರ ಮಠದ ಬೋರ್ಡಿಂಗ್‌ಗೆ ಸೇರಿಸಲು ಹೊರಡುತ್ತಾರೆ. ಮಾರ್ಗ ಮಧ್ಯೆ ಕೊಪ್ಪಳದಿಂದ ಮುಂಡರಗಿಗೆ ಹೋಗುವ ಕೊನೆಯ ಬಸ್ ತಪ್ಪಿ ಹೋಗುತ್ತದೆ.ಅಂ–ದು ರಾತ್ರಿ ಕೊಪ್ಪಳದ ಗವಿಮಠದಲ್ಲಿ ವಸತಿ ಮಾಡಲು ಅಲ್ಲಿದ್ದ ಸಹಪ್ರಯಾಣಿಕರೊಬ್ಬರ ಸಲಹೆ ನೀಡುತ್ತಾರೆ. ಕೊಪ್ಪಳದ ಗವಿಮಠಕ್ಕೆ ಈ ಬಂದ ಬಾಲಕನನ್ನು ಅಂದಿನ ಗವಿಮಠದ ಪೀಠಾಧಿಪತಿ ಶ್ರೀ ಶಿವಶಾಂತವೀರ ಮಹಾಸ್ವಾಮಿಗಳು ಗಮನಿಸುತ್ತಾರೆ, ಎಲ್ಲಿಗೆ ಹೊರಟಿದ್ದು ಎಂದು ವಿಚಾರಿಸುತ್ತಾರೆ. ತಮದಡ್ಡಿಯ ಶ್ರೀಗಳು ಮುಂಡರಗಿಗೆ ಹೋಗುವ ಉದ್ದೇಶ ತಿಳಿಸುತ್ತಾರೆ. ಗವಿಮಠದಲ್ಲಿಯೂ ಉತ್ತಮ ಶಿಕ್ಷಣ, ಬೋರ್ಡಿಂಗ್ ಇದೆ ಇಲ್ಲಿಯೇ ಪ್ರವೇಶ ಪಡೆಯಬಹುದು ನೋಡಿ ಬನ್ನಿ ಎಂದು ನೀಡುತ್ತಾರೆ. ಗವಿಮಠ,ಪ್ರೌಢಶಾಲೆ ,ಬೋರ್ಡಿಂಗ್ ನೋಡಿದ ಪರ್ವತಯ್ಯ ಹಾಗೂ ತಮದಡ್ಡಿ ಶ್ರೀಗಳು ಕೊಪ್ಪಳದಲ್ಲಿಯೇ ವ್ಯಾಸಂಗ ಮುಂದುವರೆಸಲು ನಿರ್ಧರಿಸುತ್ತಾರೆ.ವಿದ್ಯಾರ್ಥಿಯಾಗಿ ಮಠಕ್ಕೆ ಬಂದ ಪರ್ವತಯ್ಯನವರು ಅಂದಿನ ಪೀಠಾಧಿಪತಿ ಶ್ರೀ ಶಿವಶಾಂತವೀರ ಸ್ವಾಮಿಗಳ ವಿಶೇಷ ದೃಷ್ಟಿ,ಕಾಳಜಿಯಿಂದ ಹಿರಿಯ ಶ್ರೀಗಳು ತಮ್ಮ ವಾಸಸ್ಥಳದ ಸಮೀಪ, ಗವಿಯ ಬಳಿಯ ಕೋಣೆಯಲ್ಲಿಯೇ ಇರಲು ಹೇಳಿದರು.

ಪರ್ವತಯ್ಯ ಓದುತ್ತಾ, ಮಠದ ಸೇವೆ ಮಾಡುತ್ತಾ, ಗುರುಗಳ ಮಾರ್ಗದರ್ಶನದಲ್ಲಿ ಪರ್ವತದೇವರಾಗಿ ಬೆಳೆಯತೊಡಗಿದರು.

ಶಿವಶಾಂತವೀರ ಮಹಾಸ್ವಾಮೀಜಿಗಳ ಮಾರ್ಗದರ್ಶನದಲ್ಲಿ ಬಸವಾದಿ ಶರಣರ ವಚನಗಳು ಸೇರಿ, ಹಲವು ಗ್ರಂಥಗಳನ್ನು ನೀಡಿದರು. ಆಹಾರ, ದಿನಚರಿ, ಶಿಸ್ತಿನೊಂದಿಗೆ ಮತ್ತು ಅಧ್ಯಯನ ಮುಂದುವರೆಸಿದರು.

ಬಿ.ಎ.ಪದವಿಯನ್ನು ಗುಲ್ಬರ್ಗಾ ವಿಶ್ವವಿದ್ಯಾಲದ ರಂಕಿನೊಂದಿಗೆ ಉತ್ತೀರ್ಣರಾದರು.ಮುಂದೆ ಪುಣೆ,ತಿರುಪತಿಯಲ್ಲಿ ತತ್ವಶಾಸ್ತ್ರ, ಸಂಸ್ಕೃತ ಹಾಗೂ ಆಂಗ್ಲ ಭಾಷೆಯಲ್ಲಿ ಸ್ನಾತಕೋತ್ತರ ಪದವಿಗಳನ್ನು ಪಡೆದರು.

ಶ್ರೀ ಶಿವಶಾಂತವೀರ ಮಹಾಸ್ವಾಮೀಜಿಗಳ ಇಚ್ಛೆಯಂತೆ: 2002ರ ಡಿಸೆಂಬರ್ 13ರಂದು 25 ವರ್ಷದ ಪರ್ವತದೇವರಿಗೆ "ಶ್ರೀ ಅಭಿನವ ಗವಿಸಿದ್ಧೇಶ್ವರ ಮಹಾಸ್ವಾಮೀಜಿ"ಯಾಗಿ ನಿರಂಜನ ಪಟ್ಟಾಧಿಕಾರ ನೀಡಲಾಯಿತು.

ಗವಿಮಠದ ಜಾತ್ರೆಗೆ ಹೊಸ ಸ್ವರೂಪ : ಜಾತ್ರೆ ಎಂದರೆ ದೇವರ ದರ್ಶನ, ಉತ್ಸವ ಮತ್ತು ಪ್ರಸಾದಕ್ಕೆ ಸೀಮಿತವಾಗಬಾರದು. ಅದು ಸಮಾಜದ ಸಮಸ್ಯೆಗಳ ಕುರಿತು ಚಿಂತಿಸುವ, ಜನರನ್ನು ಜಾಗೃತಗೊಳಿಸುವ ಮತ್ತು ಹೊಸ ಆಲೋಚನೆಗಳಿಗೆ ವೇದಿಕೆಯಾಗಬೇಕು ಎಂಬ ದೃಷ್ಟಿಯಿಂದ ಜಾತ್ರೆಯನ್ನು ಸಾಂಸ್ಕೃತಿಕ,ಕ್ರೀಡೆ ಹಾಗೂ ಮಹಾದಾಸೋಹಗಳ ಜಾಗೃತಿ ಉತ್ಸವವಾಗಿ ರೂಪಿಸಿದರು.

ಇದರಿಂದ ಗ್ರಾಮಗಳ ಜನರು ಹಾಗೂ ಜಾನುವಾರುಗಳಿಗೆ ನೀರಿನ ಅನುಕೂಲವಾಗುವುದರ ಜೊತೆಗೆ ಅಂತರ್ಜಲ ಮಟ್ಟ ಹೆಚ್ಚಿಸಲು ನೆರವಾಗಿದೆ. ಜಿಲ್ಲೆಯ ವಿವಿಧ ಕೆರೆಗಳ ಪುನಶ್ಚೇತನಕ್ಕೂ ಒತ್ತು ನೀಡಲಾಗಿದೆ.

ಜಾತ್ರೆಯಲ್ಲಿ "ಜಲದೀಕ್ಷೆ"ಯಂತಹ ಅಭಿಯಾನಗಳ ಮೂಲಕ ನೀರಿನ ಸಂರಕ್ಷಣೆಯನ್ನು ಸಾಮಾಜಿಕ ಹಾಗೂ ಧಾರ್ಮಿಕ ಜಾಗೃತಿಯೊಂದಿಗೆ ಜೋಡಿಸಿದ್ದಾರೆ.

ಶಿಕ್ಷಣ ಮತ್ತು ಸಾಮಾಜಿಕ ಜಾಇತ್ತೀಚೆಗೆ ಕೊಪ್ಪಳ ತಾಲ್ಲೂಕಿನ ಕೋಳೂರು ಗ್ರಾಮದ ಬಳಿ ವಿದ್ಯಾರ್ಥಿನಿಯರಿಗಾಗಿ ಉಚಿತ ಹೈಟೆಕ್ ವಸತಿ ಕಾಲೇಜು ಕೂಡ ಸ್ಥಾಪಿಸಿದ್ದಾರೆ.

ಕೊಪ್ಪಳ ಭಾಗದಲ್ಲಿ ಪರಿಸರ ಮಾಲಿನ್ಯಕ್ಕೆ ಕಾರಣವಾಗಿ,ಜನರ ಆರೋಗ್ಯದ ಮೇಲೆ ದುಷ್ಪರಿಣಾಮ ಬೀರುತ್ತಿರುವ ಕಾರ್ಖಾನೆಗಳ ವಿರುದ್ಧ ಹೋರಾಡುತ್ತಿದ್ದಾರೆ.

ಕೋವಿಡ್ ಕಾಲದಲ್ಲಿ ಶ್ರೀ ಗವಿಮಠ ಮತ್ತು ಶ್ರೀಗಳು ತೋರಿದ ಸಾಮಾಜಿಕ ಕಾಳಜಿಯ ಕಾರ್ಯಗಳು ಪ್ರಶಂಸನೀಯವಾಗಿವೆ.

# ನಿಧನ ವಾರ್ತೆ



ಕೂಡ್ಲಿಗಿ, 10– ವಿಧಾನ ಸಭಾ ಕ್ಷೇತ್ರದ ಮಹಾದೇವಪುರ ಗ್ರಾಮದ ಮುಖಂಡರಾದ ಮ್ಯಾಕಲು ಓಬಣ್ಣ ನವರ ತಾಯಿಯಾದ ಶ್ರೀಮತಿ ನಾಗಮ್ಮ ( 96) ಗಂಡ ಲೇಟ್ ಮ್ಯಾಕಲು ಬೊಮ್ಮಯ್ಯ ನವರು ಇಂದು ನಿಧನ ರಾದರು.

ಹಿರಿಯ ತಾಯಿಯ ನಿಧನರಾದ ಸುದ್ದಿ ತಿಳಿದ ಬಳಿಕವೂ ನಮ್ಮ ಮಾನ್ಯ ಶಾಸಕರಾದ ಡಾ.ಶ್ರೀನಿವಾಸ್ ಎನ್. ಟಿ. ಅವರು, ದುಃಖದಲ್ಲಿ ಇರುವ ಕುಟುಂಬವನ್ನು ಭೇಟಿ ಮಾಡಿ, ಶವ ಸಂಸ್ಕಾರದಲ್ಲಿ ಭಾಗಿಯಾಗಿ, ಅವರ ಆತ್ಮಕ್ಕೆ ಶಾಂತಿ ಸಿಗಲಿ ಎಂದೂ ಭಗವಂತನಲ್ಲಿ ಪ್ರಾರ್ಥಿಸಿದರು.

ಹಾಗೆಯೇ, ಮ್ಯಾಕಲು ಓಬಣ್ಣನವರ ಕುಟುಂಬ ಮತ್ತು ಅವರ ಬಂಧು ಬಳಗ–ಕ್ಕೆ ಸಾಂತ್ವನ ಹೇಳಿ, ಧೈರ್ಯ ತುಂಬಿದರು. ಈ ಸಂದರ್ಭದಲ್ಲಿ ಶ್ರೀಯುತ ತಮ್ಮಣ್ಣ ಎನ್.ಟಿ, ಚೋರನೂರು ಅಡಿವೆಪ್ಪ, ವಿರೇಶ, ದಿನ್ನೇಮಲ್ಲಿಕಾರ್ಜುನ, ಕೆಇಬಿ ಗೋವಿಂದಣ್ಣ, ಜಿಲಾನ್, ಓಬಣ್ಣ, ನಾಗರಾಜ, ಶಿವು, ಹಿರಿಯರು, ಗ್ರಾಮಸ್ಥರು, ಬಂಧುಗಳು ಉಪಸ್ಥಿತರಿದ್ದರು.



ಕೂಡ್ಲಿಗಿ ವಿಧಾನ ಸಭಾ ಕ್ಷೇತ್ರದ ಗುಡೇಕೋಟೆ ಗ್ರಾಮದ ಚತುಸ್ಪತ ರಸ್ತೆಯ ಅಗಲೀಕರಣ ಮತ್ತು ಚರಂಡಿ ಅಭಿವೃದ್ಧಿಯ ಪ್ರಗತಿಯಲ್ಲಿರುವ ಕಾಮಗಾರಿಯನ್ನು ದಿನಾಂಕ; 10–10–2026 ರಂದು ನಮ್ಮ ಮಾನ್ಯ ಜನಪ್ರಿಯ ಶಾಸಕರಾದ ಡಾ. ಶ್ರೀನಿವಾಸ್. ಎನ್. ಟಿ. ಅವರು ಸ್ಥಳೀಯ ಮುಖಂಡರೊಂದಿಗೆ ಭೇಟಿ ನೀಡಿ ವೀಕ್ಷಣೆ ಮಾಡಿದರು. ತಾವು ಎಲ್ಲರೂ ಸಹಕಾರ ನೀಡಿರುವುದರಿಂದ ಈ ಭಾಗದಲ್ಲಿ ಒಳ್ಳೆಯ ರಸ್ತೆಯೂ ನಿರ್ಮಾಣವಾಗಲಿದೆ ಎಂದರು. ಹಾಗೆಯೇ, ಇಲ್ಲಿನ ಸ್ಥಳೀಯ ಸಾಮಾನ್ಯ ಜನರ ಕುಂದುಕೊರತೆಗಳನ್ನು ಆಲಿಸಿದರು. ಮುಖ್ಯವಾಗಿ, ಅಂಬೇಡ್ಕರ್ ಭವನ ಅಭಿವೃದ್ಧಿಗೆ ಸಂಬಂಧಿಸಿದಂತೆ ಒತ್ತು ಕೊಡುವುದಾಗಿ ತಿಳಿಸಿದರು. ಈ ಸಂದರ್ಭದಲ್ಲಿ ಕೆಇಬಿ ಗೋವಿಂದಣ್ಣ, ಜಿಲಾನ್, ನಾಗರಾಜ, ಗ್ರಾಮಸ್ಥರು, ಸಾರ್ವಜನಿಕರು ಉಪಸ್ಥಿತರಿದ್ದರು.



ಕೂಡ್ಲಿಗಿ ವಿಧಾನ ಸಭಾ ಕ್ಷೇತ್ರದ ನರಸಿಂಹಗಿರಿ ಹಾಗೂ ಚಂದ್ರಶೇಖರಪುರ ಗ್ರಾಮಗಳ ಪಶುಚಿಕಿತ್ಸಾಲಯಗಳಿಗೆ ನಮ್ಮ ಮಾನ್ಯ ಜನಪ್ರಿಯ ಶಾಸಕರಾದ ಡಾ. ಶ್ರೀನಿವಾಸ್ ಎನ್. ಟಿ ಅವರು ದಿನಾಂಕ: 10–10–2026 ರಂದು ಭೇಟಿ ನೀಡಿ, ಇಲ್ಲಿನ ಕಟ್ಟಡ ಮತ್ತು ಜಾಗವನ್ನು ಪರಿಶೀಲನೆ ಮಾಡಿ ಅಭಿವೃದ್ಧಿಗೆ ಆದ್ಯತೆ ನೀಡಲು ಪಶು ವೈದ್ಯಾಧಿಕಾರಿಗಳೊಂದಿಗೆ ಚರ್ಚಿಸಿದರು. ಮುಖ್ಯವಾಗಿ, ನಮ್ಮ ಕೂಡ್ಲಿಗಿ ಕ್ಷೇತ್ರದಲ್ಲಿ ಬರಗಾಲ ಆವರಿಸಿರುವುದರಿಂದ ಸ್ಥಳೀಯರಿಗೆ ಮೇವಿನ ಬೀಜ ವಿತರಿಸಿ, ಬರಗಾಲವನ್ನು ಎದುರಿಸುವ ಕುರಿತು ಚಿಂತನೆ ಮಾಡಿದರು. ಈ ಸಂದರ್ಭದಲ್ಲಿ ಡಾ. ಗುರುಮೂರ್ತಿ, ಡಾ. ರಾಘವೇಂದ್ರ ರೆಡ್ಡಿ, ಮತ್ತು ಸಿಬ್ಬಂದಿ ವರ್ಗದ ನಾಗರಾಜ ಅವರು, ಸಾರ್ವಜನಿಕರು ಉಪಸ್ಥಿತರಿದ್ದರು

**ಪ್ರೆಸ್ ರಿಜಿಸ್ಟ್ರಾರ್ ಜನರಲ್ ಆಫ್ ಇಂಡಿಯಾ ಅಧಿಕಾರಿಗಳಿಂದ ಪತ್ರಿಕಾ ಮಾಧ್ಯಮದವರಿಗೆ ಮಾಹಿತಿ ಕಾರ್ಯಾಗಾರ**

## 17ರಂದು ಬೆಂಗಳೂರಿನಲ್ಲಿ ಕಾರ್ಯಾಗಾರ ಪತ್ರಿಕಾ ಮಾಧ್ಯಮದವರಿಗೆ ಭಾಗವಹಿಸಲು ಆಹ್ವಾನ

ಬೆಂಗಳೂರು,10– ಪ್ರೆಸ್ ರಿಜಿಸ್ಟ್ರಾರ್ ಜನರಲ್ ಆಫ್ ಇಂಡಿಯಾ ಹಾಗೂ ಪತ್ರಿಕಾ ಮಹಾನಿರ್ದೇಶಕರ ಕಚೇರಿಯ ವತಿಯಿಂದ ಪತ್ರಿಕಾ ಮಾಧ್ಯಮದವರಿಗೆ ಮಾಹಿತಿ ಕಾರ್ಯಾಗಾರವನ್ನು ಅಕ್ಟೋಬರ್ 17, 2026ರ ಶನಿವಾರ ಬೆಳಿಗ್ಗೆ 11 ಗಂಟೆಗೆ ಬೆಂಗಳೂರಿನಲ್ಲಿ ಆಯೋಜಿಸಲಾಗಿದೆ.

ಭಾರತ ಸರ್ಕಾರವು ಜಾರಿಗೆ ತಂದಿರುವ ಪತ್ರಿಕಾ ಮತ್ತು ನಿಯತಕಾಲಿಕೆಗಳ ನೋಂದಣಿ ಕಾಯ್ದೆ, 2023 ಹಾಗೂ ಪ್ರೆಸ್ ಸೇವಾ ಪೋರ್ಟಲ್‌ಗೆ ಸಂಬಂಧಿಸಿದ ಸಮಸ್ಯೆಗಳು ಮತ್ತು ಪ್ರಕ್ರಿಯೆಗಳ ಕುರಿತು ಪತ್ರಿಕಾ ಮಾಧ್ಯಮದವರಿಗೆ ಅರಿವು ಮೂಡಿಸುವುದು ಈ ಕಾರ್ಯಾಗಾರದ ಮುಖ್ಯ ಉದ್ದೇಶವಾಗಿದೆ.

ಈ ಕಾರ್ಯಾಗಾರದಲ್ಲಿ ದಿನಪತ್ರಿಕೆಗಳು, ನಿಯತಕಾಲಿಕೆಗಳು, ಮಾಲೀಕರು, ಉಸ್ತುವಾರಿ ಅಧಿಕಾರಿಗಳು, ಮುದ್ರಣಾಲಯದ ನಿರ್ವಾಹಕರು ಹಾಗೂ ಸಂಬಂಧಪಟ್ಟ ಇತರರು ಭಾಗವಹಿಸಬಹುದಾಗಿದೆ. ನೋಂದಣಿ ಪ್ರಕ್ರಿಯೆ, ನಿಯಮಗಳು ಹಾಗೂ ಪತ್ರಿಕಾ ಪ್ರಕಟಣೆಗಳಿಗೆ ಸಂಬಂಧಿಸಿದ ವಿವಿಧ ವಿಷಯಗಳ ಕುರಿತು ಅಧಿಕಾರಿಗಳು ಮಾಹಿತಿ ನೀಡಲಿದ್ದಾರೆ.

ಭಾಗವಹಿಸುವ ಪತ್ರಿಕಾ ಮಾಧ್ಯಮದವರು ತಮ್ಮ ಸಂದೇಹಗಳನ್ನು ಪರಿಹರಿಸಿಕೊಳ್ಳಲು ಹಾಗೂ ನೋಂದಣಿ ಪ್ರಕ್ರಿಯೆಗೆ ಸಂಬಂಧಿಸಿದ ಮಾಹಿತಿಯನ್ನು ಪಡೆದುಕೊಳ್ಳಲು ಇದು ಉತ್ತಮ ಅವಕಾಶವಾಗಿದೆ. ಆದ್ದರಿಂದ ಸಂಬಂಧಪಟ್ಟ ಪತ್ರಿಕಾ ಮಾಧ್ಯಮದವರು ಕಾರ್ಯಾಗಾರದಲ್ಲಿ ಭಾಗವಹಿಸಿ ಇದರ ಪ್ರಯೋಜನ ಪಡೆದುಕೊಳ್ಳುವಂತೆ ಆಯೋಜಕರು ಕೋರಿದ್ದಾರೆ.

ಭಾಗವಹಿಸುವಿಕೆ ಖಚಿತ ಪಡಿಸಿಕೊಳ್ಳಲು ಹೆಚ್ಚಿನ ಮಾಹಿತಿಗಾಗಿ ಸಂಪರ್ಕಿಸಲು ತಿಳಿಸಲಾಗಿದೆ : ಕರಿಪ್ಪಾ ಪಂತ್, ಬಿ.ಎ.ಎಸ್. ಸಹಾಯಕ ನಿರ್ದೇಶಕರು: 7683097968 ಮಧು ಎಂ. ಬಿ.ಎ.ಎಸ್. ಸಹಾಯಕ ನಿರ್ದೇಶಕರು: 9880087597 ಇ–ಮೇಲ್: pibbng@gmail.com ಗೆ ಮಾಹಿತಿ ಕಳುಹಿಸಿ ಖಚಿತ ಪಡಿಸಿಕೊಳ್ಳಬಹುದು.

# ಎಂ.ಎಂ.ಪಾಟೀಲ್ ಕಾಲೇಜು ರಾಜ್ಯಮಟ್ಟಕ್ಕೆ ಆಯ್ಕೆ



ವರದಿ :ಡಿ.ಪರಶುರಾಮಪ್ಪ

ಹೂವಿನಹಡಗಲಿ, 10– ಪಟ್ಟಣದ ಎಂ.ಎಂ. ಪಾಟೀಲ್ ಕಾಲೇಜಿನ ವಿದ್ಯಾರ್ಥಿಗಳು ಕ್ರೀಡೆ ಹಾಗೂ ಸಾಂಸ್ಕೃತಿಕ ಸ್ಪರ್ಧೆಗಳಲ್ಲಿ ಗಮನಾರ್ಹ ಸಾಧನೆ ಮಾಡುವ ಮೂಲಕ ತಾಲೂಕಿಗೆ ಕಾಲೇಜಿಗೆ ಕೀರ್ತಿ ತಂದಿದ್ದಾರೆ.

ಅಕ್ಟೋಬರ್ 9ರಂದು ಹರಪನಹಳ್ಳಿಯಲ್ಲಿ ನಡೆದ ಜಿಲ್ಲಾ ಮಟ್ಟದ ವೈಯಕ್ತಿಕ ಕ್ರೀಡಾಕೂಟದಲ್ಲಿ ಕಾಲೇಜಿನ ವಿದ್ಯಾರ್ಥಿಗಳು ವಿವಿಧ ಸ್ಪರ್ಧೆಗಳಲ್ಲಿ ತಮ್ಮ ಪ್ರತಿಭೆ ಮೆರೆದಿದ್ದಾರೆ. 1500 ಮೀಟ–ರ್ ಓಟ ಹಾಗೂ ಉದ್ದ ಜಿಗಿತದಲ್ಲಿ ಪ್ರಥಮ ಸ್ಥಾನ ಗಳಿಸಿದ್ದು, ಒಟ್ಟು ಏಳು ವಿಭಾಗಗಳಲ್ಲಿ ರಾಜ್ಯಮಟ್ಟದ ಸ್ಪರ್ಧೆಗಳಿಗೆ ಆಯ್ಕೆಯಾಗಿದ್ದಾರೆ.

ಇದೇ ರೀತಿ, ಕೊಟ್ಟೂರಿನಲ್ಲಿ ನಡೆದ ಚದುರಂಗ ಸ್ಪರ್ಧೆಯಲ್ಲಿ ದ್ವಿತೀಯ ಪಿಯುಸಿ ವಿಜ್ಞಾನ ವಿಭಾಗದ ವಿದ್ಯಾರ್ಥಿ ಚೈತ್ರ ರಾಜ್ಯಮಟ್ಟಕ್ಕೆ ಆಯ್ಕೆಯಾಗಿದ್ದಾ–ರೆ. ಹೊಸಪೇಟೆಯಲ್ಲಿ ನಡೆದ ಸಾಂಸ್ಕೃತಿಕ ಸ್ಪರ್ಧೆಗಳಲ್ಲಿ ಕಾಲೇಜಿನ ವಿದ್ಯಾರ್ಥಿಗಳು ವಿಭಾಗಮಟ್ಟಕ್ಕೆ ಆಯ್ಕೆಯಾಗುವ ಮೂಲಕ ತಮ್ಮ ಪ್ರತಿಭೆಯನ್ನು ಸಾಬೀತುಪಡಿಸಿದ್ದಾರೆ.

ವಿದ್ಯಾರ್ಥಿಗಳ ಸಾಧನೆಗೆ ಕಾಲೇಜಿನ ಪ್ರಾಂಶುಪಾಲ ದಾಸರಹಳ್ಳಿ ಸತೀಶ, ಬೋಧಕ ಹಾಗೂ ಬೋಧಕೇತರ ಸಿಬ್ಬಂದಿ, ಆಡಳಿತ ಮಂಡಳಿಯ ಅಧ್ಯಕ್ಷರು ಮತ್ತು ಸರ್ವ ಸದಸ್ಯರು ಅಭಿನಂದನೆ ಸಲ್ಲಿಸಿ, ಮುಂದಿನ ಸ್ಪರ್ಧೆಗಳಲ್ಲಿಯೂ ಯಶಸ್ಸು ಸಾಧಿಸುವಂತೆ ಹಾರೈಸಿದ್ದಾರೆ.

'HOSAPETE NADIMIDITA ' KANNADA DAILY NEWSPAPER PRINTEDE BY RAMJEE NAIK R PUBLISHER AND OWNED BY RAMJEE NAIK R, PRINTED AT HOMBALI PRINTING, 3787/A/6-7C MAHENDRAKAR CIRCLE, GADAG KARNATAKA-582101
PRGI NO: KNKAN/26/A1167 PAGES-4, DATE 01/03/2026. PUBLISHED AT HN,93, KALLAHALLI VILLAGE, HOSPET POST, VIJAYANAGARA, -583201, KARNATAKA STATE, EDITOR:RAMJEE NAIK R, CELL-9448717472.